ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಜೂನ್ -೨೦೧೬ ಸಂಚಿಕೆ - ೧೧

ಭ್ರಷ್ಟಾಚಾರಕ್ಕೊಂದು ಸ್ಮಾರಕ ಸೌಧ!

*

ಸರ್ವೋದಯ ಸಮಾಜ ರಚನೆ ಕಡೆಗೆ

*

ಮಣ್ಣಿನಲ್ಲೇನಿದೆ ಮಣ್ಣು?

*

ಮೋಹದ ಮೇಲೆ ಗದಾಘಾತ

ಜನಪದ ವಿಚಾರದಲ್ಲಿ

ಜೂನ್ - ೨೦೧೬

೧. ಭ್ರಷ್ಟಾಚಾರಕೊಂದು ಸ್ಮಾರಕ ಸೌಧ

ಎಲ್ಲ ಪ್ರಕಾರದ ಸ್ಮಾರಕಗಳ ನಿರ್ಮಾಣ ಎಲ್ಲೆಲ್ಲಿಯೂ ಆಗುತ್ತಿರುವಾಗ ಸಜೀವವಾಗಿ ದೇಶವನ್ನು ದಹಿಸುತ್ತಿರುವ ಭ್ರಷ್ಟಾಚಾರದ ನೆನಪಿಗಾಗಿ ಸ್ಮಾರಕವನು ರಚಿಸಬಹುದೆಂಬ ಚಿಂತನೆ ಈ ಲೇಖನ.

–ಸುರೇಂದ್ರ ಕೌಲಗಿ

೨. ಸರ್ವೋದಯ ಸಮಾಜ ರಚನೆಯತ್ತ

ಇರುವ ಎಲ್ಲ ಪ್ರಕಾರದ ವಾದಗಳು ಸಮಾಜವನ್ನು ಒಂಗಡಿಸುವಂಥವಾಗಿವೆ. ಸರ್ವೋದಯ ವಿಚಾರವೊಂದೆ ಸಮಾಜವನ್ನು ಕೂಡಿಸುವಂಥದ್ದಾಗಿದೆ. ಸರ್ವೋದಯ ವಿಚಾರದ ಪ್ರವರ್ತಕರ ವಿಚಾರ ಇದರಲ್ಲಿವೆ.

–ವಿನೋಬಾ

೩. ನೈರ್ಮಲ್ಯ ಮತ್ತು ವೃಕ್ಷಾಭಿವೃದ್ಧಿಗಾಗಿ ಜನಾಂದೋಲನ

ಬರಗಾಲ, ಹವಮಾನ ವೈಪರಿತ್ಯ, ಪ್ರದುಶನ್, ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ಹುಡುಕಲು ನಡೆದಿರುವ ಒಂದು ಪ್ರಯತ್ನದ ನೋಟ ಇಲ್ಲಿದೆ.

–ಪಿ.ಎಸ್.ಚಂದ್ರಣ್ಣ ಮತ್ತು ಪಾರ್ವತಮ್ಮ

೪. ಮೋಹದ ಮೇಲೆಯೇ ಗೀತೆಯ ಗದಾಘಾತ

ಮನುಷ್ಯನನ್ನು ಅವನ ಸ್ವಧರ್ಮದಿಂದ ವಂಚಿಸುವ ವಸ್ತು ಮೋಹ. ಯಾವುದೇ ಬಗೆಯ ಮೋಹವಿಲ್ಲದ ಮನುಷ್ಯ ಸಂಸಾರ ಸಾಗರವನ್ನು ಸುಲಭವಾಗಿ ದಾಟಬಲ್ಲ ಎಂಬಿತ್ಯಾದಿ ವಿಚಾರಗಳು ಇಲ್ಲಿ ಪ್ರಕಟಿತ.

–ಅನುವಾದ:–ಸಿದ್ದವನಹಳ್ಳಿ ಕೃಷ್ಣಶರ್ಮ ಲೇ– ವಿನೋಬಾ

೫. ಸಮಾಜವಾದದ ಕನಸ್ಸು ಬಿತ್ತಿದ ಎರಡು ಎಕರೆ ಭೂಮಿ

–ಸಲೀಂ ಚೌದರಿ

೬. ನಾಲ್ಕೂ ನಿಟ್ಟಿನಿಂದ

೭. ಚಿಂತನೆಗೊಂದು ಸಂಗತಿ

೮ ಸಿದ್ಧರಾಮಯ್ಯನವರಿಗೆ ಮನವಿ

೯.ಸರ್ವೋದಯ ಆಂದೋಲನದ ಮುನ್ನಡೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೧೬
ಸಂಪುಟ - ೧೬
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಒಂದು ವಟ ವೃಕ್ಷ

ಆಲದ ಮರದ ಬಿಳಲು, ಒಡಲಾಳದಿಂದ ಹೊರಗೆ
ಬಂದಂತೆ ಕಾಣುತಿದೆ ಕರುಳು

ಆಹಾರವ ಅರಸಿ ಆಗಮಿಸಿದಂತಿದೆ
ಆಕಾಶದಿಂದ ಅಶ್ವಿನಿ ದೇವತೆಗಳು
ಬೀಜದ ಬೇರು ಮರವಾಗಿ
ಮರದ ಕೊಂಬೆ ಬಿಳಲಾಗಿ
ಆ ಬಳಲೇ ಮತ್ತೆ ಬೇರಾಗಿ
ಭೂಮಿಯ ಒಟ್ಟಿಗೆ ಬೆಳೆಸುವೆ
ಬಿಡಿಸಲಾಗದ ಬಂಧನದ ನಂಟು
ಏನು ಸೋಜಿಗ!
ಹುಟ್ಟಿನ ಚಕ್ರದ ಎಂತಹ ಗುಟ್ಟು

ತಲೆ ಎತ್ತಿ ಬೆಳೆಯುತ್ತಾ ಮೇಲೆ ಹೋದದ್ದು
ಬಿಳಲಾಗಿ ಬಾಗಿ ಇಳಿದು ಬಂದದ್ದು
ವಿಶಾಲವಾಗಿ ಹರಡಿ ನಿಂತದ್ದು
ಕೋಟಿ ಕೋಟಿ ಕ್ರಿಮಿ ಕೀಟ
ಪ್ರಾಣಿ ಪಕ್ಷಿಗಳಿಗೆ ಆಶ್ರಯ ತಾಣವಾದದ್ದು
ತುಂಬಿದ ಒಂದು ಸುಂದರ
ಅವಿಭಾಜ್ಯ ಕುಟುಂಬದಂತೆ ಕಾಣುವುದು

ಒಡೆದು ಹೋಗುವ, ಮನೆಗಳು-ಮನಗಳು
ಈ ಪ್ರಸನ್ನ ಮರವನ್ನು ನೋಡಿ
ಬಹಳ ಇದೆ ಕೂಡಿ ಬಾಳುವ ಕಲೆಯನ್ನು
ಕಲಿಯಬೇಕಾದದ್ದು

-ಜರಗನಹಳ್ಳಿ ಶಿವಶಂಕರ್
(ಕಸ್ತೂರಿ ಸಾಭಾರ)

ಭ್ರಷ್ಟಾಚಾರಕೊಂದು ಸ್ಮಾರಕ ಸೌಧ!
(ರಾಷ್ಟ್ರ ಜೀವನದ ಪತನವೇ?)

-ಸುರೇಂದ್ರ ಕೌಲಗಿ

ಇದು ಸ್ಮಾರಕಗಳ ಯುಗ. ಮಹಾತ್ಮಾ ಗಾಂಧೀಜಿಯವರ ಭಕ್ತರು ಗಾಂಧೀಜಿಯವರ ಸ್ಮರಣೆಗಾಗಿ ಅವರ ಪುತ್ತಳಿ ಸ್ಥಾಪಿಸುತ್ತಾರೆ. ಸಂವಿಧಾನ ಶಿಲ್ಪಿ ಡಾ॥ ಅಂಬೇಡ್ಕರರ ಭಕ್ತರು ಅವರ ಸ್ಮರಣೆಗಾಗಿ ಅಂಬೇಡ್ಕರರ ಪುತ್ತಳಿ ಸ್ಥಾಪಿಸುತ್ತಾರೆ. ಬಸವೇಶ್ವರರ ಭಕ್ತರು ಅವರ ಸ್ಮರಣೆಗಾಗಿ ಬಸವೇಶ್ವರರ ಪುತ್ತಳಿ ಸ್ಥಾಪಿಸುತ್ತಾರೆ. ಅದೇ ರೀತಿ ಕನಕದಾಸರ, ಪುರಂದರದಾಸರ, ಪುತ್ತಳಿಗಳನ್ನು ಅವರವರ ಭಕ್ತರು ಸ್ಥಾಪಿಸುತ್ತಾರೆ. ಸರ್ದಾರ ವಲ್ಲಭಭಾಯಿ ಪಟೇಲ್‌ರ ಭಕ್ತರಾದ ನರೇಂದ್ರ ಮೋದಿಯವರು ಅಮೇರಿಕಾದಲ್ಲಿಯ ಲಿಬರ್ಟಿ ವಿಗ್ರಹಕ್ಕಿಂತ ಎತ್ತರವಾದ ವಿಗ್ರಹವನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಛತ್ರಪತಿ ಶಿವಾಜಿಯ ಭಕ್ತರು ಅರಬಿ ಸಮುದ್ರದಲ್ಲಿ ಶಿವಾಜಿಯ ದೊಡ್ಡ ಪುತ್ತಳಿಯನ್ನು ಸ್ಥಾಪಿಸಲು ನಿಶ್ಚಯಿಸಿದ್ದಾರೆ. ದಿನ ಬೆಳಗಾದರೆ ವಿವಿಧ ಜಾತಿದೇವತೆಗಳ ಪುತ್ತಳಿಗಳು ಎಲ್ಲೆಂದರಲ್ಲಿ ಸ್ಥಾಪಿತಗೊಂಡು ದೇವಸ್ಥಾನಗಳಾಗಿ ರೂಪಗೊಳ್ಳುತ್ತಿವೆ. ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ-ತಮ್ಮ ಧರ್ಮದ ಪ್ರಾರ್ಥನಾ ಮಂದಿರಗಳನ್ನು ಎತ್ತರೆತ್ತರವಾಗಿ, ಬೃಹದಾಕಾರವಾಗಿ ಕಟ್ಟಲು ಪೈಪೋಟಿ ನಡೆಸುತ್ತಾರೆ. ಕನ್ನಡಾಭಿಮಾನಿಗಳು ಬೆಳಗಾವಿಯಲ್ಲಿ ಕಿತ್ತೂರು ಚೆನ್ನಮ್ಮನವರ ಪುತ್ತಳಿಯನ್ನು ಸ್ಥಾಪಿಸಿ ಹೆಮ್ಮೆಪಡುತ್ತಾರೆ. ಬೆಂಗಳೂರು ನಿವಾಸಿಗರು ತಮ್ಮ ನಗರದ ಸಂಸ್ಥಾಪಕನಾದ ಕೆಂಪೇಗೌಡರ ಪುತ್ತಳಿಯನ್ನು ನಗರ ಮಧ್ಯದಲ್ಲಿ ಸ್ಥಾಪಿಸಿ ಅಭಿಮಾನ ಪಡುತ್ತಾರೆ. ಮೈಸೂರು ನಗರದ ನಿವಾಸಿಗಳು ತಾವೇನು ಕಡಿಮೆಯೆಂದು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರ ಪುತ್ತಳಿ ಸ್ಥಾಪಿಸಿ ಸಂತೋಷಪಡುತ್ತಾರೆ. ತಮಿಳುನಾಡಿನಲ್ಲಂತೂ ಜನರು ತಮ್ಮ ನೆಚ್ಚಿನ ಸಿನಿಮಾ ನಟಿಯರ ವಿಗ್ರಹಗಳನ್ನು ಮೊದಲಗೊಂಡು ರಾಜಕೀಯ ಮುಖಂಡರಗಳವರೆಗೆ ಎಲ್ಲೆಲ್ಲೂ ವಿಗ್ರಹಳನ್ನು ಸ್ಥಾಪಿಸಿದ್ದಾರೆ. ಇಂದು ದೇಶದ ಯಾವುದೇ ರಾಜ್ಯದ ಯಾವುದೇ ನಗರಗಳಿಗೆ, ಪಟ್ಟಣಗಳಿಗೆ, ಹೋದರೆ ಆಯಾ ಸ್ಥಳಗಳ ಮುಖಂಡ ಅಥವಾ ಹಿರಿಯ ವ್ಯಕ್ತಿಗಳ ಪುತ್ತಳಿಗಳು ನೋಡಲು ಸಿಗುತ್ತದೆ. ಕನ್ಯಾಕುಮಾರಿಯಿಂದ ಹಿಮಾಲಯುದವರೆಗೆ, ಅರಬ್ಬಿ ಸಮುದ್ರದಿಂದ ಬಂಗಾಳಕೊಲ್ಲಿಯವರೆಗಿನ ಪ್ರದೇಶದಲ್ಲಿರಬಹುದಾದ ಪ್ರತಿಮೆಗಳ ಸಂಖ್ಯೆ ದೇಶದ ಜನಸಂಖ್ಯೆಯಷ್ಟೆ ಆಗಬಹುದು!

ಪ್ರತಿಮೆಯನ್ನಿ, ಪುತ್ತಳಿಯನ್ನೆ, ಸ್ಮಾರಕವೆನ್ನಿ, ಅಥವಾ ಸೌಧವೆನ್ನಿ ಅವೆಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಅವೆಲ್ಲವೂ ಅಲ್ಲಲ್ಲಿಯ ಜನಪದದ ಮನೋಭಾವನೆ, ಸಂಸ್ಕೃತಿ ಇತಿಹಾಸ ಇತ್ಯಾದಿ ವಿಷಯುಗಳನ್ನು ಬಹಿರಂಗಪಡಿಸುತ್ತವೆ. ಸ್ಥಾಪಿತಗೊಂಡಿರುವ ಈ ಎಲ್ಲ ಬಗೆಯ ಸ್ಮಾರಕಗಳ ಹಿಂದೆ ಇರುವ ಚರಿತ್ರೆ, ಕಥೆ, ಹೋರಾಟ, ಸಾಹಿತ್ಯ ಇತ್ಯಾದಿ ವಿಷಯಗಳ ಬಗ್ಗೆ ಯಾರಾದರೂ ಸಂಶೋಧನೆ ಮಾಡಿ ಪಿ.ಎಚ್.ಡಿ ಪಡೆಯಬಹುದಾಗಿದೆ. ಆ ಸಂಶೋಧನೆಯ ಪ್ರಬಂಧದ ಗಾತ್ರ ರಾಮಾಯಣ-ಮಹಾಭಾರತ ಗ್ರಂಥಗಳಿಗಿಂತಲೂ ಬೃಹತ್‌ವಾಗಿರುವುದರಲ್ಲಿ ಸಂದೇಹವಿಲ್ಲ!

ಸ್ಮಾರಕಗಳ ಈ ಯುಗದಲ್ಲಿ ಇನ್ನೊಂದು ಬಹು ಮುಖ್ಯವಾದ ವಿಷಯಕ್ಕೆ ಸಂಬಂಧಿಸಿದ ಸ್ಮಾರಕವನ್ನು ಇನ್ನೂ ಏಕೆ ಸ್ಥಾಪಿಸಿಲ್ಲ ಎಂಬ ಯೋಚನೆ ಬರುವ ಹೊತ್ತಿಗೆ ಸರಿಯಾಗಿ ಪತ್ರಿಕೆಯಲ್ಲಿಯ ಓದುಗರ ಪತ್ರವೊಂದರ ಮೇಲೆ ದೃಷ್ಟಿ ಬಿತ್ತು. ಮನಸ್ಸಿನಲ್ಲಿ ಮೂಡಿದ ವಿಚಾರಕ್ಕೂ, ಮತ್ತು ಓದುಗರೊಬ್ಬರ ಸಲಹೆ ದೃಷ್ಟಿಗೆ ಬಿದ್ದಿದ್ದಕ್ಕೂ ಮೇಳವಾದದು ಸರಿಯಲ್ಲವೇ ಎಂದನಿಸಿತು. ಅದುವೆ ದೇಶದ ಜನಜೀವನದಲ್ಲಿ, ಆಡಳಿತದಲ್ಲಿ, ಶಿಕ್ಷಣ ವ್ಯವಸ್ಥೆಯಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ, ನ್ಯಾಯ್ಯಾಂಗದಲ್ಲಿ, ಎಲ್ಲೆಂದರಲ್ಲಿ ಅಮೂರ್ತವಾಗಿ ಕುಳಿತಿರುವ ಭ್ರಷ್ಟಾಚಾರದ ಸ್ಮಾರಕ ಏಕೆ ಇದುವರೆಗೆ ನಿರ್ಮಾಣವಾಗಿಲ್ಲ ಎಂಬುದು! ಸಾಮಾನ್ಯವಾಗಿ ಸ್ಮಾರಕಗಳು ತೀರಿಹೊದವರಂಥದಾಗಿರುತ್ತದೆ ಅಥವಾ ಅಮರಾಗಿರುವಂಥದಾಗಿರುತ್ತದೆ. ಆದರೆ ಸರ್ವಾಂತರಯಾಮಿಯಾಗಿರುವ ಈ ಭ್ರಷ್ಟಾಚಾರ ಸತ್ತಿಲ್ಲವಾದ್ದರಿಂದ ಅಥವಾ ಸಾಯುವುದಿಲ್ಲವಾದ್ದರಿಂದ ಭ್ರಷ್ಟಾಚಾರದ ನೆನಪಿನಲ್ಲಿ ಸ್ಮಾರಕ ಬರುವುದು ಕಷ್ಟಸಾಧ್ಯವೇ ಆಗಿರಬೇಕು. ಆದರೂ ಕೂಡ ಭ್ರಷ್ಟಾಚಾರದ ಸ್ಮಾರಕ ಬೇರೊಂದು ಕಾರಣಕ್ಕಾಗಿ ಆಗಬೇಕಾಗಿದೆಂದೆನ್ನಿಸುತ್ತದೆ. ಸ್ವಾತಂತ್ರ್ಯ ಬಂದು ಏಳು ದಶಕಗಳಾದ ಮೇಲೆಯೂ, ಸುಮಾರು ಮೂರನಾಲ್ಕು ತಲೆಮಾರುಗಳಾದ ಮೇಲೆಯೂ ಗಾಂಧೀಜಿ, ಅಂಬೇಡ್ಕರ, ಲೋಹಿಯಾ, ಮುಂತಾದವರು ಕನವರಿಸಿದ್ದ ಆದರ್ಶ ಭಾರತದ ಬದಲಿಗೆ, ಸ್ವಾತಂತ್ರ್ಯದ ಸೌಧವನ್ನು ಭ್ರಷ್ಟಾಚಾರದ ಅಡಿಗಲ್ಲ ಮೇಲೆ ೨೧ನೇ ಶತಮಾನದ ಭಾರಿತೀಯರು ಕಟ್ಟಿದ್ದಾರೆ ಎಂಬುದನ್ನು ಮುಂದಿನ ಪೀಳಿಗೆಗೆ ಜ್ಞಾಪಿಸುವುದಕ್ಕಾಗಿಯಾದರೂ ಭ್ರಷ್ಟಾಚಾರದ ಸ್ಮಾರಕ ಸೌಧವೊಂದು ಬೇಕಲ್ಲವೇ? ಅಂಥ ಸೌಧವನ್ನು ಕಟ್ಟುವರಾರು ಮತ್ತು ಅದನ್ನು ಕಟ್ಟುವುದಕ್ಕೆ ಹಣ ಕೊಡುವವರಾರು ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಕಗ್ಗಂಟಿನ ಪ್ರಶ್ನೆಗಳಿಗೆ ಸಹಜವಾಗಿಯೇ ಉತ್ತರವೊಂದು ಸಿಕ್ಕಿದೆ! ಭ್ರಷ್ಟಚಾರದ ನೆನಪಿನ ಸೌಧವಾಗಿ ರೇಡಿಮೆಡ್ ಕಟ್ಟಡವೊಂದು ದೇಶದ ಹಣಕಾಸಿನ ರಾಜ್ಯಧಾನಿ ಮುಂಬೈ ನಗರದಲ್ಲಿ

ಸಿದ್ಧವಾಗಿದೆ. ಆದರೆ ಹೈಕೋರ್ಟಿನ ಆದೇಶದ ಮೇರೆಗೆ ಇಷ್ಟರಲ್ಲಿಯೇ ಉರುಳಿಸಲ್ಪಡಲಿರುವ ಈ ಕಟ್ಟಡವನ್ನು ಉಳಿಸುವ ಪ್ರಯತ್ನ ಮಾಡಬೇಕಾಗಿದೆ. ಆ ಕಟ್ಟಡ ೩೨ ಅಂತಸ್ತಿನದಾಗಿದೆ. ಅದನ್ನು ಆದರ್ಶ ಹೌಸಿಂಗ್ ಸೊಸೈಟಿ ಎಂಬ ಸಂಸ್ಥೆ ಮುಂಬೈ ನಗರದ ಬಹು ಬೆಲೆಬಾಳುವ ಪ್ರದೇಶದಲ್ಲಿ ಕಟ್ಟಿದೆ. ಈ ಕಟ್ಟಡವನ್ನು ಕಟ್ಟುವುದರ ಹಿಂದೆ ಇದ್ದ ಉದ್ದೇಶ ಮಹೋನ್ನತ್ತವಾದುದುದಾಗಿದ್ದಿತು. ಭಾರತ ಮತ್ತು ಪಾಕಿಸ್ತಾನದ ಮಧ್ಯ ನಡೆದ ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗಾಗಿ ಮತ್ತು ಅವರ ಕುಟುಂಬಗಳಿಗಾಗಿ ನಿವಾಸಗಳನ್ನು ಕೊಡಬೇಕೆಂಬುದಾಗಿತ್ತು. ಕಟ್ಟಡದ ನೀಲನಕ್ಷೆಯನ್ನು ತಯಾರಿಸಿ ಸಂಬಂಧಿಸಿದವರಿಗೆ ಅನುಮತಿಗಾಗಿ ಸಲ್ಲಿಸಿದ ಪತ್ರದಲ್ಲಿ ೬ ಅಂತಸ್ತಿಗಳಿಗಾಗಿ ಅನುಮತಿ ಪಡೆಯಲಾಗಿತ್ತು. ಆದರೆ ಕ್ರಮೇಣ ಅಂತಸ್ತುಗಳನ್ನು ಅಕ್ರಮವಾಗಿ ಭ್ರಷ್ಟಾಚಾರದ ಮೂಲಕ ಹೆಚ್ಚಿಸುತ್ತಾ ಹೋಗಿ ಕೊನೆಗೆ ೩೨ ಅಂತಸ್ತುಗಳನ್ನು ನಿರ್ಮಿಸಲಾಯಿತು. ಈ ಎಲ್ಲ ಅಂತಸ್ತುಗಳಲ್ಲಿರುವ ಮನೆಗಳಲ್ಲಿ ಬಹುಪಾಲು ಮನೆಗಳು ಪ್ರಭಾವಿತ ರಾಜಕಾರಣಿಗಳ, ಅಧಿಕಾರಿಗಳ, ಅವರ ಸಂಬಂಧಿ ವರ್ಗದವರಿಗೆ ನಿಯಮ ಬಾಹಿರವಾಗಿ ಭ್ರಷ್ಟಾಚಾರದ ಮೂಲಕ ದೊರೆತವು. ಕಟ್ಟಡದ ನಿರ್ಮಾಣಕ್ಕೆ ಮೊದಲು ಪಡೆಯಬೇಕಾಗಿದ್ದ ಪರಿಸರಕ್ಕೆ ಸಂಬಂಧಿಸಿದ ಆಕ್ಷೇಪಣಾರಹಿತ ಪತ್ರವನ್ನು ಪಡೆಯಲ್ಲಿಲ್ಲ. ಈ ೩೨ ಅಂತಸ್ತಿನ ಕಟ್ಟಡದ ನಿರ್ಮಾಣ ಮತ್ತು ಎಲ್ಲ ಹಂತಗಳಲ್ಲಿ ಭ್ರಷ್ಟಾಚಾರ ಕೆಲಸ ಮಾಡಿತು. ಮುಂದೊಂದು ದಿನ ಕಟ್ಟಡದ ನಿರ್ಮಾಣದಲ್ಲಿ ಮತ್ತು ಅದರಲ್ಲಿಯ ಮನೆಗಳ ಹಂಚಿಕೆಯ ವಿಷಯದಲ್ಲಿ ನಡೆದ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಬಯಲಿಗೆ ಬಂದಾಗ. ವಿವಾದ ನ್ಯಾಯಸ್ಥಾನಕ್ಕೆ ಹೋಯಿತು. ಭ್ರಷ್ಟಾಚಾರದ ಮೂರ್ತಸ್ವರೂಪದಂತಿರುವ ಈ ಕಟ್ಟಡವನ್ನು ಪೂರ್ತಿ ನೆಲಸಮ ಮಾಡಬೇಕೆಂದು ಕೋರ್ಟ್ ಆದೇಶಿಸಿತು. ನ್ಯಾಯಾಲಯದ ಈ ಆದೇಶದಂತೆ ಆದರ್ಶ ಸೊಸೈಟಿಯ ಈ ಕಟ್ಟಡ ಇನ್ನು ಅಲ್ಪ ಸಮಯದಲ್ಲಿಯೇ ನೆಲಸಮವಾಗಲಿದೆ. ದೇಶದಲ್ಲಿರುವ ಭ್ರಷ್ಟಾಚಾರಕೊಂದು ಸ್ಮಾರಕ ಇರಬೇಕೆಂಬ ವಿಚಾರ ಬಂದಾಗ ಆದರ್ಶ ಸೊಸೈಟಿಯ ೩೨ ಅಂತಸ್ತಿನ ಈ ಭವ್ಯವಾದ ಕಟ್ಟಡವನ್ನೆ ಭ್ರಷ್ಟಾಚಾರದ ಸ್ಮಾರಕವನ್ನಾಗಿ ಏಕೆ ಪರಿವರ್ತಿಸಬಾರದೆಂಬ ವಿಚಾರ ಈಗ ಗಾಳಿಯಲ್ಲಿ ತೇಲುತ್ತಿದೆ ಈ ವಿಚಾರ ಸಾಕಾರಗೊಳ್ಳುವುದೆ ಇಲ್ಲವೆ ಎಂಬುದು ಬೇರೆ ಮಾತು. ಆದರೆ ಭ್ರಷ್ಟಾಚಾರಕ್ಕೊಂದು ಸ್ಮಾರಕ ಇದ್ದರೆ ಒಳ್ಳೆಯದಲ್ಲವೆ? ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ಹಿರೋಶಿಮಾ-ನಾಗಾಸಾಕಿ ಮೇಲೆ ಬಿದ್ದ ಅಣುಬಾಂಬ್‌ಗಳಿಂದ ಆದಪ್ರಾಣಹಾನಿಯನ್ನು ನೆನಪಿಸಿ ಇನ್ನು ಮುಂದೆ ಅಂಥ ಭಯಾನಕ ಮಾರಕಾಸ್ತ್ರಗಳನ್ನು ಉಪಯೋಗಿಸದೆ ಇರುವಂತೆ ಮಾಡಲು

ಸ್ಮಾರಕವನ್ನಾಗಿ ಇರಿಸಿರುವಂತೆಯೇ ಆದರ್ಶ ಸೊಸೈಟಿಯ ಕಟ್ಟಡವನ್ನು ಭ್ರಷ್ಟಾಚಾರದ ಸ್ಮಾರಕವನಾಗಿರಿಸಬೇಕು. ರಾಷ್ಟ್ರದ ಜನಜೀವದಲ್ಲಿ ಮುಂದೆಂಯಾದರೂ ಭ್ರಷ್ಟಾಚಾರ ತೊಲಗಿ ಎಲ್ಲೆಲ್ಲೂ ಸದಾಚಾರ ಸ್ಥಾಪಿತವಾಗಬಹುದು.

ಕರ್ನಾಟಕ ರಾಜ್ಯದಲ್ಲಿ ಲೋಕಾಯುಕ್ತರ ಸ್ಥಾನವನ್ನು ತೆಗೆದುಹಾಕಿ ಈಗ ಆ ಸ್ಥಳಕ್ಕೆ ಭ್ರಷ್ಟಾಚಾರ ನಿಗ್ರಹದಳವನ್ನು (ಎ.ಸಿ.ಬಿ) ಸ್ಥಾಪಿಸಿಲಾಗಿದೆ. ಮುಖ್ಯಮಂತ್ರಿಯವರೆ ಈ ದಳದ ಅಧಿಪತಿಯಾಗಿರುತ್ತಾರೆ. ಇದೊಂದು ವಿಚಿತ್ರ ಸನ್ನಿವೇಶವೇ ಸರಿ. ಭ್ರಷ್ಟಾಚಾರ ಹುಟ್ಟುವ ಸ್ಥಳದಲ್ಲೆ ಅದರ ನಿಗ್ರಹದಳ ಇದೆ! ಆದ್ದರಿಂದ ಭ್ರಷ್ಟಾಚಾರ ನಿರ್ಮೂಲನೆ ಎಷ್ಟರ ಮಟ್ಟಿಗೆ ಸಾಧ್ಯವೆಂದು ತಿಳಿಯುವುದು ಅವರವರ ತೀರ್ಮಾನಕ್ಕೆ ಬಿಟ್ಟ ವಿಷಯ. ರಾಷ್ಟ್ರ ಮಟ್ಟದಲ್ಲಿ ಹೆಲಿಕ್ಯಾಪ್ಟರ ಖರೀದಿಯ ವಿಷಯದಲ್ಲಿ ಆದ ಭ್ರಷ್ಟಾಚಾರ ಸಂಸತ್ತನ್ನು ಅಲ್ಲಾಡಿಸುತ್ತಿದೆ. ಈ ಹಗರಣದಲ್ಲಿ ರಾಜಕಾರಣಿಗಳಲ್ಲದೆ, ರಾಷ್ಟ್ರಪತಿಯವರನ್ನೂ ಎಳೆಯಲಾಗುತ್ತಿದೆ. ಅವರ ಹೆಸರನ್ನು ಇಟಲಿ ದೇಶದ ಮಿಲಾನ್ ಕೋರ್ಟಿನಲ್ಲಿ ಹೆಸರಿಸಲಾಗಿದೆ. ಈ ವ್ಯಾಪಾರ ಕುದುರಿದಾಗ ಪ್ರಣಬ ಮುಖರ್ಜಿಯವರು ಅರ್ಥಮಂತ್ರಿಯಾಗಿದ್ದರು. ಆಗಸ್ಟಾ ವೆಸ್ಟಲ್ಯಾಂಡ ಹೆಲಿಕ್ಯಾಪ್ಟರ್ ಹಗರಣ ದೇಶದಲ್ಲಿರುವ ಎಲ್ಲ ಸರ್ಕಾರಗಳಲ್ಲಿಯ ಭ್ರಷ್ಟಾಚಾರದ ಹಗರಣಗಳ ಒಂದು ಸಂಕೇತವಷ್ಟೇ. ಆ ಭ್ರಷ್ಟಾಚಾರದ ಹಿಮಗಡ್ಡೆಯ ಕೆಳಗೆ ಎಷ್ಟೊಂದು ಭ್ರಷ್ಟಾಚಾರಗಳಿವೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಪನಾಮಾ ಬ್ಯಾಂಕಿನದಲ್ಲಿ ಮೂರು ಸಾವಿರ ಭಾರತೀಯರ ಕಪ್ಪು ಹಣವಿದೆ. ಆದು ಕಾಲಕ್ರಮೇಣ ಬೆಳಕಿಗೆ ಬಂದೇ ಬರುವದು.

ಇತ್ತೀಚೆಗೆ ರಚಿತವಾಗಿರುವ ಗ್ರಾಮಪಂಚಾಯತಿಗಳು, ತಾಲ್ಲೂಕ ಪಂಚಾಯತಿಗಳು, ಮತ್ತು ಜಿಲ್ಲಾಪರಿಷತ್ತಗಳು, ಭ್ರಷ್ಟಾಚಾರಗಳಿಂದ ಮುಕ್ತವಾಗಿರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಆ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಚುಣಾವಣೆ ಭ್ರಷ್ಟಾಚಾರದ ವಾತಾವರಣದಲ್ಲಿಯೇ ನಡೆಯಿತು. ಭ್ರಷ್ಟಾಚಾರದ ನೀರನ್ನೇ ಕುಡಿದು ಗಾಳಿಯನ್ನೇ ಸೇವಿಸಿದ ಮತದಾರರು ಹಾಗೂ ಉಮೇದುವಾರರು ಹೇಗೆ ತಾನೆ ಭ್ರಷ್ಟಾಚಾರದಿಂದ ಮುಕ್ತರಾಗಿರಲು ಸಾಧ್ಯ? ಆದ್ದರಿಂದ ದೇಶವನ್ನು ಇಂಥ ಅಧೋಗತಿಗೆ ತಂದ ಭ್ರಷ್ಟಾಚಾರದ ಜ್ಞಾಪನಾರ್ಥಕವಾಗಿ ಒಂದು ಸ್ಮಾರಕ ಇರಬೇಕೆಂದೂ ಮತ್ತು ಆ ಸ್ಮಾರಕ ನೋಡಿ ಮುಂದಿನ ಪ್ರಜೆಗಳು ತಾವು ಭ್ರಷ್ಟಾಚಾರ ಮತ್ತು ಮಿಥ್ಯಾಚಾರ ಮಾಡದಿರಲೆಂದೂ ಸಂಕಲ್ಪ ಮಾಡುವುದು ಇಂದು ತುಂಬಾ ಅತ್ಯಗತ್ಯ ಎಂದು ಅನಿಸುತ್ತದಲ್ಲವೆ?

■

ಸರ್ವೋದಯ ಸಮಾಜ ರಚನೆಯತ್ತ

–ವಿನೋಬಾ

(ಗಾಂಧೀಜಿ ಸರ್ವೋದಯದ ವಿಚಾರವನ್ನು ಜಗತ್ತಿನ ಮುಂದೆ ಇಟ್ಟರಾದರೂ ಆ ವಿಚಾರಕ್ಕೆ ವ್ಯವಹಾರಿಕ ಮತ್ತು ಜನಪ್ರಿಯ ವ್ಯಾಖ್ಯಾಯನ್ನು ಮಾಡಿದವರು ಆಚಾರ್ಯ ವಿನೋಬಾ ಭಾವೆ. ಒಂದರ್ಥದಲ್ಲಿ ಅವರು ಸರ್ವೋದಯ ಸಿದ್ಧಾಂತದ ಪ್ರಮುಖ ವ್ಯಾಖ್ಯಾನಕಾರರು. ಇಲ್ಲಿ ವಿನೋಬಾ ಅರ್ಥೈಯಿಸಿದ ಸರ್ವೋದಯ ಸಿದ್ಧಾಂತದ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತದೆ. ಈ ಲೇಖನಮಾಲೆ ಸರ್ವೋದಯ ಕಾರ್ಯಕರ್ತರಿಗೆ ಉಪಯುಕ್ತವಾಗುವುದೆಂದು ಆಶಿಸಲಾಗಿದೆ –ಸಂ)

ಸರ್ವೋದಯ ಎಂದರೆ, ಎಲ್ಲರ ಉದಯ. ಅಂದರೆ, ಯಾರೊಬ್ಬರ ಉದಯ ಮತ್ತು ಯಾರೊಬ್ಬರ ಅಸ್ತ ಹೀಗಲ್ಲ. "ಸರ್ವೋದಯ" ಶಬ್ದ ಬಹು ಒಳ್ಳೆಯದು. ಗಾಂಧೀಜಿಯವರಿಂದ ರಚಿತವಾಗಿದೆ. ಸರ್ವಭೂತ ಹಿತೇರತಾಃ ಕಲ್ಪನೆ ಅದರಲ್ಲಿದೆ. ಬೈಬಲ್‌ನಲ್ಲಿ ಕೂಡ ಇಂಥ ವಿಚಾರ ಬರುತ್ತದೆ. ರಸ್ಕಿನ್‌ನು ಅದೇ ಆಧಾರ ತೆಗೆದುಕೊಂಡು ತನ್ನ "ಅನ್ ಟು ಧಿಸ್ ಲಾಸ್ಟ್" ಎಂಬ ಪುಸ್ತಕ ಬರೆದಿದ್ದಾನೆ. ಅರ್ಥವೇನೆಂದರೆ ಮೊದಲ ಶ್ರೇಣಿಯವರನ್ನು ಯಾವ ರೀತಿ ರಕ್ಷಿಸಲಾಗುತ್ತದೋ ಅದೇ ರೀತಿ ಕೊನೆಯಲ್ಲಿದ್ದವರನ್ನು ಕೂಡ ರಕ್ಷಿಸಬೇಕು.

ನಾವು ಎಷ್ಟೊಂದು ಅಧಿಕವಾಗಿ ಚಿಂತನೆ ಮತ್ತು ಪ್ರಯೋಗ ಮಾಡುತ್ತಾ ಹೋಗುತ್ತೇವೆಯೋ ಅಷ್ಟೆ ಅಧಿಕವಾಗಿ ನಮಗೆ ಅರ್ಥ ಕೊಡುವ ಅರ್ಥಘನ ಶಬ್ದ ಸರ್ವೋದಯ. ಇಡೀ ಅರ್ಥ ಒಮ್ಮೆಲ್ಲೆ ಆಗುವಂಥದ್ದಲ್ಲ. ನಿಧಾನವಾಗಿ ಅರ್ಥವಾಗುವಂಥದು. ದೇವರು ಮಾನವ ಸಮಾಜವನ್ನು ಈ ಜಗತ್ತಿನಲ್ಲಿ ನಿರ್ಮಾಣ ಮಾಡಿದಾಗ ಅದರಲ್ಲಿ ಒಬ್ಬನ ಹೀತ ಇನೊಬ್ಬನ ಹೀತಕ್ಕೆ ವಿರೋಧವಾಗಿ ಇರಬೇಕೆಂಬ ಇಚ್ಛೆ ಎಂದೂ ಅವನಿಗೆ ಇದ್ದಿರಲಿಕ್ಕಿಲ್ಲ. ಯಾವುದೇ ತಂದೆ ಒಬ್ಬ ಮಗನ ಹಿತ ಇನ್ನೋರ್ವ ಮಗನ ಹಿತಕ್ಕೆ ವಿರೋಧವಾಗಿರಲೆಂದು ಬಯಸುವದಿಲ್ಲ. ಮಕ್ಕಳಲ್ಲಿ ವಿಚಾರ ಭೇದವಿರಲು ಸಾಧ್ಯ. ಆದರೆ ಹಿತ ವಿರೋಧ ಇರಲಾರದು. ಭಿನ್ನ-ಭಿನ್ನ ವಿಚಾರಗಳಿದ್ದರೆ ಅಂತಃ ಅನೇಕ ವಿಚಾರಗಳು ಸೇರಿ ಒಂದು ಪೂರ್ಣ ವಿಚಾರವಾಗುತ್ತದೆ. ಏಕೆಂದರೆ ಯಾವುದೇ ಒಬ್ಬ ವ್ಯಕ್ತಿಗೆ ಪೂರ್ಣವಾದ ವಿಚಾರ ಹೊಳೆಯುತ್ತದೆಂದು ಹೇಳಲಾಗುವುದಿಲ್ಲ. ಒಬ್ಬನಿಗೆ ಒಂದು ವಿಚಾರದ ಭಾಗ ಹೊಳೆದರೆ, ಇನ್ನೊಬ್ಬನಿಗೆ ಎರಡನೆಯ ಒಂದು ಭಾಗ ಹೊಳೆಯುತ್ತದೆ. ಮೂರನೆಯವನಿಗೆ ಮೂರನೆ ಭಾಗ ಹೊಳೆಯುತ್ತದೆ. ಈ ರೀತಿ ಎಲ್ಲ ಸೇರಿ ಪೂರ್ಣ ವಿಚಾರವಾಗುತ್ತದೆ. ಆದ್ದರಿಂದ

ವಿಚಾರ ಭೇದಗಳು ಇರಬೇಕಾದುದು ಅಗತ್ಯ. ಇದರಲ್ಲಿ ದೋಷವಿಲ್ಲ, ಬದಲಿಗೆ ಗುಣವೇ ಇದೆ. ಹಿತವಿರೋಧ ಮಾತ್ರ ಇರಕೂಡದು.

ಸರ್ವೋದಯ ಎಂದರೆ, ಎಲ್ಲರ ಉದಯ. ಎಲ್ಲರ ಬಗ್ಗೆ ಸಮಾನ ಚಿಂತೆ ಮತ್ತು ಎಲ್ಲರ ಮೇಲೆ ಸಮಾನ ಪ್ರೇಮ! ಯಾವ ರೀತಿ ತಾಯಿ ತನ್ನ ಎಲ್ಲ ಮಕ್ಕಳ ಮೇಲೆ ಸಮಾನವಾಗಿ ಪ್ರೇಮ ಇಟ್ಟಿರುತ್ತಾಳೋ ಅದೇ ರೀತಿ ಸಮಾನ ಪ್ರೇಮದಿಂದ ಸಮಾಜರಚನೆ ಮಾಡಬೇಕು. "ಇಂಥ ಸಮಾಜರಚನೆ ಮಾಡುವುದಕ್ಕೆ ಕುಳಿತರೆ ಕೆಲಸಮಾಡುವ ಉತ್ಸಾಹ ಕಡಿಮೆಯಾಗುವುದು ಹೆಚ್ಚು ಕೆಲಸಮಾಡಿದರೆ ಹೆಚ್ಚು ಹಣ ಸಿಗುತ್ತದೆಂಬ ಆಸೆ ಇದ್ದಾಗ ಜನರು ಹೆಚ್ಚು ಪರಿಶ್ರಮ ಮಾಡುತ್ತಾರೆಂದು" ಕೆಲವರು ಹೇಳುತ್ತಾರೆ. ವಸ್ತು ಸ್ಥಿತಿ ಹೀಗಿಲ್ಲ. ಕುಟುಂಬದಲ್ಲಿ ತಂದೆ ಹೆಚ್ಚು ಕೆಲಸವನ್ನು ಮಾಡಿಯೇ ಮಾಡುತ್ತಾನೆ. ತನಗೆ ಹೆಚ್ಚು ರೊಟ್ಟಿ ದೊರೆಯುತ್ತದೆಂದು ಆತ ಹೆಚ್ಚು ಕೆಲಸ ಮಾಡುತ್ತಾನೆಯೇ? ಕುಟುಂಬದಲ್ಲಿ ಎಲ್ಲ ಸದಸ್ಯರು ಪ್ರೇಮಪೂರ್ವಕವಾಗಿ ಎಲ್ಲರಿಗೂ ಸಮಾನ ಹಕ್ಕು ಇದೆ ಎಂದು ತಿಳಿಯುತ್ತಾರೆ. ಯಾರು ಎಷ್ಟು ಸಂಪಾದಿಸುತ್ತಾರೊ ಅದಕ್ಕನುಗುಣವಾಗಿ ತಿನ್ನುತ್ತಾರೆಂಬ ರೀತಿ ಪರಿವಾರದಲ್ಲಿರುವುದಿಲ್ಲ. ಹೆಚ್ಚು ಅಥವಾ ಕಡಿಮೆ ಸಂಪಾದಿಸಿದರೂ ಕೂಡ ಎಲ್ಲರಿಗೂ ರೊಟ್ಟಿಯ ಮೇಲೆ ಸಮಾನ ಹಕ್ಕು ಇರುತ್ತದೆ ಆದರೂ ಕೆಲಸಕ್ಕಾಗಿ ಉತ್ಸಾಹ ಇದ್ದೇಇರುತ್ತದೆ. ಆದರೆ ಹೆಚ್ಚು ಸಂಪಾದನೆ ಮಾಡಿದವನು ಹೆಚ್ಚು ಭೋಗಿಸುತ್ತಾನೆಂಬ ವಿಚಾರವಿದ್ದಾಗ ಮಾತ್ರ ಸಮಾಜದಲ್ಲಿ ಪುರುಷಾರ್ಥ ಹೆಚ್ಚಾಗುತ್ತದೆಂಬ ವಿಚಾರವನ್ನು ನಾನು ಅಂತ್ಯಂತ ಅಧಾರ್ಮಿಕ ವಿಚಾರವೆಂದು ತಿಳಿಯುತ್ತೇನೆ.

ಇಲ್ಲೊಂದು ಪ್ರಶ್ನೆ ಹುಟ್ಟುತ್ತದೆ. ಏನೆಂದರೆ ನಾನು ಎರಡನೆಯವರ ಬಗ್ಗೆ ಚಿಂತೆ ಮಾಡುತ್ತೇನೆ. ಆದರೆ ಅವರು ನನ್ನ ಬಗ್ಗೆ ಚಿಂತೆ ಮಾಡುವುದಿಲ್ಲವೆಂತಾದರೆ ಏನಾಗುವದು? ಇಂದು ಹೀಗೇ ನಡೆಯುತ್ತಿದೆ. ಭಾರತ ಪಂಚಶೀಲವನ್ನು ಮನ್ನಿಸುತ್ತದೆ. ಆದ್ದರಿಂದ ಅದು ಸೈನ್ಯವನ್ನು ಹೆಚ್ಚಿಸಲು ಬಯಸುವುದಿಲ್ಲವಾದರೂ ಪಾಕಿಸ್ತಾನ ಸೈನ್ಯವನ್ನು ಹೆಚ್ಚಿಸುತ್ತಿರುವುದರಿಂದ ಭಾರತ ಕೂಡ ಸಿದ್ಧವಾಗಿರಬೇಕೆಂದು ಯೋಚಿಸುತ್ತದೆ. ಇದರ ಅರ್ಥವೇನೆಂದರೆ ಕೋತಿಯಂತೆ ಕುಣಿಯುವ ಶಕ್ತಿಯನ್ನು ನಾವು ಪಾಕಿಸ್ತಾನದ ಕೈಗೆ ಕೊಟ್ಟುಬಿಟ್ಟಿದ್ದೇವೆ! ಎದುರಿನಲ್ಲಿ ಸಾಧುವಿದ್ದರೆ ನಾವು ಸಾಧು ಆಗುವೆವು, ಒಂದುವೇಳೆ ದುಷ್ಟನಿದ್ದರೆ ದುಷ್ಟಾರಾಗುವೆವು! ನಾವು ದುಷ್ಟರಾಗುವ ಅಥವ ಸಾಧುವಾಗುವ ಅಧಿಕಾರವನ್ನು ಬೇರೆಯವರ ಕೈಗೆ ಕೊಟ್ಟು ಬಿಟ್ಟಿದ್ದೇವೆ. ನಮ್ಮ ಕೈಯಲ್ಲಿ ಅಭಿಕ್ರಮ ಉಳಿಯಲಿಲ್ಲ. ಕರ್ಮಯೋಗಿಯ ಮುಖ್ಯಲಕ್ಷಣ ತನ್ನ ಅಭಿಕ್ರಮ ತನ್ನ ಕೈಯಲ್ಲಿಯೇ ಇಟ್ಟುಕೊಳ್ಳುವುದಾಗಿದೆ. ನೀರಿನ ಸ್ವಭಾವ ಬಾಯಾರಿಕೆಯನ್ನು ಇಂಗಿಸುವದು. ಹಸುಗೆ ಬಾಯಾರಿಕೆಯಾಗಿದ್ದರೆ ನದಿ ಅದರ ಬಾಯಾರಿಕೆ ಇಂಗಿಸುತ್ತದೆ. ಬಾಯಾರಿದಂಥ

ಸಿಂಹ ಬಂದರೆ ಅದರ ಬಾಯಾರಿಕೆಯನ್ನೂ ಕೂಡ ಇಂಗಿಸುತ್ತದೆ. ಅಂದರೆ ನೀರು ತನ್ನ ಸ್ವಭಾವವನ್ನು ತನ್ನ ಕೈಯಲ್ಲಿ ಖಾಯಂ ಆಗಿ ಇಟ್ಟು ಕೊಂಡಿತು. ಒಳ್ಳೆಯ ಪುಸ್ತಕ ಓದುವುದ್ದಾಗಿದ್ದರೂ ಸೂರ್ಯ ತನ್ನ ಪ್ರಕಾಶ ಕೊಡುತ್ತಾನೆ, ಕೆಟ್ಟ ಪುಸ್ತಕ ಓದಿದರೂ ಕೊಡುತ್ತಾನೆ. ಒಳ್ಳೆಯ ಪುಸ್ತಕ ಓದಿದರೆ ಮಾತ್ರ ಪ್ರಕಾಶ ಕೊಡುತ್ತೇನೆ. ಕೆಟ್ಟ ಪುಸ್ತಕ ಓದಿದರೆ ಕತ್ತಲೆ ಮಾಡುತ್ತೇನೆಂದು ಸೂರ್ಯ ಹೇಳುವುದಿಲ್ಲ. ಏಕೆಂದರೆ ಅವನ ಕೈಯಲ್ಲಿಯೇ ಅವನ ಅಭಿಕ್ರಮ ಇದೆ. ಅದೇ ರೀತಿ ಸರ್ವೋದಯವೂ ತನ್ನ ಕೈಯಲ್ಲಿ ಅಭಿಕ್ರಮ ಇಟ್ಟುಕೊಳ್ಳುತ್ತದೆ. ಅದು ಒಳ್ಳೆಯ ಮಾತನ್ನು ಸ್ವಯಂ ಪ್ರಾರಂಭಿಸಿ ಬಿಡುತ್ತದೆ. ನೀವು ನನ್ನ ಚಿಂತೆ ಮಾಡಿ ಅಥವ ಬಿಡಿ, ನಾನು ನಿಮ್ಮ ಚಿಂತೆ ಮಾಡುವೆನು ಎಂದು ಹೇಳುವದು. ಈ ರೀತಿ ನಿಶ್ಚಯವಿದ್ದಾಗಲೇ ಕೆಲಸವಾಗುವುದು.

ಸಾಮ್ಯದ ವಿಚಾರ ಜನರಿಗೆ ಪ್ರೀಯವಾದಾಗಲೇ ಮತ್ತು ಸಾಮ್ಯಯೋಗವಲ್ಲದ್ದು ಅಧರ್ಮವಾಗುತ್ತೇಂಬುದರ ತಿಳುವಳಿಕೆ ಜನರಿಗೆ ಬಂದಾಗಲೇ ಸಾಮ್ಯಯೋಗಿ ಸರ್ವೋದಯ ಸಮಾಜರಚನೆಯಾಗುವುದು.

ಸರ್ವೋದಯದ ಕಡೆಯ ಕಲ್ಪನೆ ಏನೆಂದರೆ ಗ್ರಾಮದ ಭೂಮಿ ಎಷ್ಟಿದೇಯೋ ಅದೆಲ್ಲವೂ ಗ್ರಾಮಸ್ಥರದೇ. ನಾವು ಮುಂದೆ ಹೋಗಿ ಹೇಳುವುದೇನೆಂದರೆ ಒಂದುವೇಳೆ ಒಂದು ರಾಜ್ಯದಲ್ಲಿ ಭೂಮಿ ಕಡಿಮೆ ಇದ್ದು ಜನಸಂಖ್ಯೆ ಹೆಚ್ಚಿದ್ದರೆ ಈ ರಾಜ್ಯದ ಜನರು ಬೇರೊಂದು ರಾಜ್ಯಕ್ಕೆ ಹೋಗಿ ಇರಬಹುದು. ಇದೇ ರೀತಿ ಈ ದೇಶದ ಜನರು ಎರಡನೆ ದೇಶಕ್ಕೆ ಕೂಡ ಹೋಗಬಹುದು. ಸಮಗ್ರ ಪೃಥ್ವಿಮಾತೆ ಪೂರ್ಣ ಮುಕ್ತಳಿದ್ದಾಳೆ. ಯಾರು ಎಲ್ಲಿಬೇಕಾದರು ಇರಬಹುದು. ಯಾರು ಎಲ್ಲಿ ಸೇವೆ ಮಾಡಬಯಿಸುತ್ತಾರೊ ಅಲ್ಲಿ ಸೇವೆ ಮಾಡಬಹುದು. ಆದರೆ ಆರ್ಥಿಕ, ಸಾಮಾಜಿಕ ಮತ್ತು ರಾಜನೈತಿಕ ಭೇದ ಇಟ್ಟುಕೊಳ್ಳಕೂಡದು.

ಇಂದು ಜಪಾನಲ್ಲಿ ಜನಸಂಖ್ಯೆ ಬಹಳ ಹೆಚ್ಚಿದೆ ಮತ್ತು ಭೂಮಿ ಕಡಿಮೆ. ಆ ಕಡೆಗೆ ಆಸ್ಟ್ರೇಲಿಯಾದಲ್ಲಿ ಭೂಮಿ ಬಹಳ, ಜನಸಂಖ್ಯೆ ಕಡಿಮೆ. ಆದರೆ ಆಸ್ಟ್ರೇಲಿಯಾದವರು ಜಪಾನಿಯರನ್ನು "ಇದು ನಮ್ಮ ಅಪ್ಪನ ಭೂಮಿ" ಎಂದು ಹೇಳಿ ಬರಗೊಡುವುದಿಲ್ಲ. ಮಾನವರೆಲ್ಲರು ಇಡೀ ಪ್ರಪಂಚದ ಮಕ್ಕಳೆಂದು ಅವರು ಯೋಚನೆಯನ್ನೇ ಮಾಡುವುದಿಲ್ಲ. ಇಡೀ ಮಾನವತೆಯ ಬಗ್ಗೆ ವಿಚಾರ ಮಾಡಿದರೆ ಆಸ್ಟ್ರೇಲಿಯನ್ನರು ಖಂಡಿತ ಪ್ರೇಮದಿಂದ ಜಪಾನಿಯರಿಗೆ ಭೂಮಿ ಕೊಡುವರು. ಪ್ರೇಮದಿಂದ ಕೊಡದಿದ್ದರೆ ಜಗಳಾಡುವುದರ ಮೂಲಕ ಮತ್ತು ರಕ್ತಮಯ ಕ್ರಾಂತಿಯ ನಂತರ ಕೊಡುವರು. ಏಕೆಂದರೆ ಯಾವುದು ಅವಶ್ಯಕತೆಯಾಗಿರುತ್ತದೋ ಅದು ಪೂರ್ಣಗೊಳ್ಳುವವರೆಗೆ ಮಾನವನಿಗೆ ಸಮಾಧಾನವಾಗುವುದಿಲ್ಲ.

ಅಂತರಾಷ್ಟ್ರೀಯ ಕ್ಷೇತ್ರದಲ್ಲೂ ಕೂಡ ಭೂದಾನದ ಕ್ರಮ ಜಾರಿಗೆ ಬರಬೇಕು

ಹಾಗೂ ಇಡೀ ಜಗತ್ತು ಒಂದು ಎಂದು ಎಲ್ಲರೂ ಒಪ್ಪಬೇಕು. ಪ್ರತಿಯೊಬ್ಬ ವಿಶ್ವನಾಗರೀಕನಾಗಬೇಕು. ಯಾರೇ ಆಗಲಿ ಯಾವುದೇ ದೇಶಕ್ಕೆ ಹೋಗಿ ನೆಲಸಬೇಕು ಮತ್ತು ಕೆಲಸಮಾಡಬೇಕು. ಈ ರೀತಿಯಾದಾಗ ಭೂದಾನಯಜ್ಞ ಸಫಲವಾಗುವುದು.

ಭೂದಾನಯಜ್ಞನದ ಹಿಂದಿರುವ ವಿಚಾರಕ್ಕೆ 'ಸಾಮ್ಯಯೋಗ' ಎಂದು ಹೆಸಿರಿಡಲಾಗಿದೆ. ಈ ಸಾಮ್ಯಯೋಗದ ಆಧಾರದ ಮೇಲೆ ನಾವು ಸರ್ವೋದಯ ಸಮಾಜದ ನಿರ್ಮಾಣ ಮಾಡಬಯಸುತ್ತೇವೆ. ಸರ್ವೋದಯ ಸಮಾಜ ಬಹುಸಂಖ್ಯೆಕರದಷ್ಟೆ ಅಲ್ಲ ಇಡೀ ಸಮಾಜದ ಎಲ್ಲರ ಹಿತ ಬಯಸುತ್ತದೆ.

ಸರ್ವೋದಯವನ್ನು ಬಿಟ್ಟು ಉಳಿದೆಲ್ಲ ವಿಚಾರಪ್ರಣಾಳಿಗಳು 'ಅ-ಸರ್ವವಾದಿ' ಇವೆ. ಕೆಲವು ನಾವು ಬ್ರಾಹ್ಮಣರ ಸೇವೆ ಮಾಡುತ್ತೇವೆಂದು ಹೇಳುತ್ತವೆ. ಇನ್ನು ಕೆಲವು ನಾವು ಮುಸಲ್ಮಾನರ ಸೇವೆ ಮಾಡುತ್ತೇವೆಂದು ಹೇಳುತ್ತವೆ. ಈ ರೀತಿ ಚಿಕ್ಕ-ಚಿಕ್ಕ ಸಮೂಹಗಳ ಸೇವೆಯಲ್ಲಿ ಯಾರು ಮಗ್ನರಾಗಿರುತಾರೋ ಅವರನ್ನು ಕಮ್ಯೂನಾಲಿಸ್ಟ (ಜಾತಿವಾದಿ) ಎಂದು ಕರೆಯಲಾಗುತ್ತದೆ.

ಕಮ್ಯೂನಿಸ್ಟರು ಕೂಡ ಅ-ಸರ್ವವಾದಿಯಾಗಿರುತ್ತಾರೆ. ಸಮಾಜದಲ್ಲಿ ಎರಡು ವರ್ಗಗಳಿವೆಂದು ಅವರು ತಿಳಿಯುತ್ತಾರೆ. ಒಂದು ಬಡವರ ವರ್ಗ, ಇನ್ನೊಂದು ಶ್ರೀಮಂತರರದು. ಆದರೆ ಪ್ರತಿಯೊಂದು ವರ್ಗದಲ್ಲಿ ಒಳ್ಳೆ ಮತ್ತು ಕೆಟ್ಟ ಎಂಬ ಎರಡು ಪ್ರಕಾರದ ಜನರು ಇರುತ್ತಾರೆ. ಆದ್ದರಿಂದ ಅವರ ಮಧ್ಯದ ಯುದ್ಧ ರಾಮ-ರಾವಣ ಯುದ್ಧವಲ್ಲ. ಬದಲಿಗೆ ಕೌರವ-ಪಾಂಡವರ ಯುದ್ಧ ವಾಗುವುದು. ಎಲ್ಲಿ ಎರಡೂ ಪಕ್ಷಗಳಲ್ಲಿ ಒಳ್ಳೆ ಮತ್ತು ಕೆಟ್ಟ ಜನರಿರುತ್ತಾರೋ ಅವರಿಬ್ಬರ ಯುದ್ಧದ ಪರಿಣಾಮವಾಗಿ ಇಬ್ಬರ ನಾಶವೂ ಆಗುತ್ತದೆ. ಎಲ್ಲಿ ಒಂದೆಡೆ ಪೂರ್ಣ ಸತ್ಯ ಮತ್ತು ಇನ್ನೊಂದೆಡೆ ಪೂರ್ಣ ಅಸತ್ಯವಿರುತ್ತದೋ ಆ ಯುದ್ಧದಲ್ಲಿ ವೇಗ ಬರುತ್ತದೆ.

ನಾವು ಇಡೀ ಜಗತ್ತಿನಿಂದ ದಾನ ಕೇಳುತ್ತೇವೆ. ಕೆಲವರು ಕೊಡುತ್ತಾರೆ, ಕೆಲವರು ಏನನ್ನೂ ಕೊಡುವುದಿಲ್ಲ. ಕೊಡುವಂಥವರೆಲ್ಲರೂ ಉದಾರ ಪಕ್ಷಕ್ಕೆ ಸೇರುತ್ತಾರೆ! ಕೊಡದೆ ಇರದೆ ಇರುವವರು ಜಿಪುಣರ ಪಕ್ಷಕ್ಕೆ ಸೇರುತ್ತಾರೆ. ಎರಡೂ ಪಕ್ಷಗಳಲ್ಲಿ ಕೆಲವರು ಬಡವರಿದ್ದರೆ. ಇನ್ನೂ ಕೆಲವರು ಶ್ರೀಮಂತರಿರುತ್ತಾರೆ. ಈ ರೀತಿ ಗುಣಗಳ ಆಧಾರದ ಮೇಲೆ ಉಂಟಾದ ಪಕ್ಷಗಳ ಮದ್ಯ ಯುದ್ಧವಾದರೆ ಅದರಲ್ಲಿ ಜಿಪುಣರು ಉಳಿಯಲಾರರು. ಬೆಳಕು ಮತ್ತು ಕತ್ತಲೆಯ ಮಧ್ಯ ಎಂದಾದರೂ ಯುದ್ಧವಾಗಿದೆಯೇ? ಎಲ್ಲ ಸಜ್ಜನರು ಒಂದಾದಲ್ಲಿ ದುರ್ಜನರು ಉಳಿಯರು.

ತುಳುಸಿದಾಸರು ಸುಮತಿ ಕುಮತಿ ಸಬಕೆ ಊರ ರಹಹಿ ಎಂದು ಬರೆದಿದ್ದಾರೆ. ಪ್ರತಿಯೊಬ್ಬರ ಹೃದಯದಲ್ಲಿ ಸದ್ಬುದ್ಧಿ ಮತ್ತು ದುರ್ಬುದ್ಧಿ ಎರಡೂ ಇರುತ್ತವೆ. ನಾವು ಸದ್ಬುದ್ಧಿಯನ್ನು ಏಕತ್ರಗೊಳ್ಳಿಸಲು ಪ್ರಯತ್ತಿಸಬೇಕು. ಆಗ ಶಕ್ತಿ

ಉಂಟಾಗುವದು. ಮನುಷ್ಯನಲ್ಲಿರುವ ಸದ್ಭಾವನೆಗಳನ್ನು ಒಟ್ಟುಗೂಡಿಸಿ ದುರ್ಭಾವನೆಗಳ ವಿರುದ್ಧ ಯುದ್ಧ ಮಾಡುವದೇ ಸಾಮ್ಯಯೋಗದ ಪ್ರಯತ್ನ. ಆ ಯುದ್ಧ ಒಂದೇ ಮಂಚೂಣಿಯಲ್ಲಿರದೇ ಸಾವಿರಾರು ಮಂಚೂಣಿಯಲ್ಲಿ ನಡೆಯುವದು. ಪ್ರತಿಯೊಂದು ಹೃದಯದಲ್ಲಿ ಸಾಮ್ಯಯೋಗದಿಂದ ಮಾನವತೆಯ ಕೆಲಸವನ್ನು ಸರ್ವೋದಯ ಮಾಡಬಯಸುತ್ತದೆ. ಆದರೆ ಕಮ್ಯೂನಿಸಂ ಮತ್ತು ಕಮ್ಯೂನಾಲಿಸಂ ವಿಭಜಿಸಿ ಕೆಲಸಮಾಡುತ್ತವೆ. ಹೀಗೆ ಮಾಡುವುದರಿಂದ ಅವು ಆರಂಭದಲ್ಲಿಯೇ ತಮ್ಮ ಶಕ್ತಿಯನ್ನು ಕಳೆದುಕೊಂಡು ಬಿಡುತ್ತವೆ. ಇಡೀ ಮಾನವತೆಯನ್ನು ಒಂದು ಗೂಡಿಸಲು ಪ್ರಯತ್ನ ಮಾಡಿದ್ದಲ್ಲಿ ಆರಂಭದಲ್ಲಿಯೇ ಶಕ್ತಿ ವೃದ್ಧಿಸುವುದು. ನಾವು ಬಡವರ ಮೇಲೆ ಪ್ರೇಮಮಾಡುವಂತೆಯೇ ಶ್ರೀಮಂತರ ಮೇಲೆಯೂ ಪ್ರೇಮ ಮಾಡುತ್ತೇವೆಂಬುದು ನಮ್ಮ ಹಿರಿಮೆಯಾಗಿದೆ.

ನಮ್ಮ ಸಮಸ್ಯೆ ಸಂಘರ್ಷದ ತತ್ವಗಳೊಂದಿಗೆ ಅಲ್ಲ ಬದಲಿಗೆ, ಸಂಗ್ರಹದ ತತ್ವಗಳೊಂದಿಗೆ. ಅಂದರೆ ಲೋಕ ಸಂಗ್ರಹದ ಮೂಲಕ ಸಮಾಜದ ಸಮಸ್ಯೆಗಳು ಬಗೆಹರಿಯುವುದಿದೆ. ಯಾವುದು ಎಲ್ಲರನ್ನೂ ಸಂಗ್ರಹೀತ ಮಾಡುತ್ತದೋ ಅದೇ ಧರ್ಮವೆಂದು ಗೀತೆ ನಮಗೆ ತಿಳಿಸಿದೆ. ಅದು ಯಾರನ್ನೂ ಭಿನ್ನ-ಭಿನ್ನರಾಗಲೂ ಅವಕಾಶ ಕೊಡುವುದಿಲ್ಲ. ಆದ್ದರಿಂದ ನಮ್ಮ ಸಾಮಾಜಿಕ ಸೇವೆಯೆ ಸಫಲತೆಯ ಆಧಾರ ವರ್ಗ ಸಂಘರ್ಷವಲ್ಲ, ಸರ್ವೋದಯ. ಎಲ್ಲರಲ್ಲಿ ಅವಿರೋಧ ಬದಲಾವಣೆಯನ್ನು ಉಂಟುಮಾಡುವುದು ನಮ್ಮ ನೀತಿಯಾಗಿದೆ. ಸಾಮ್ಯವಾದವು ವ್ಯಕ್ತಿಯ ಚಿಂತೆ ಮಾಡುವುದಿಲ್ಲ, ಸಾಮ್ಯಯೋಗವು ವ್ಯಕ್ತಿಯ ಉಪೇಕ್ಷೆ ಮಾಡಲಾರದು. ಯಾರು ಸಾಮ್ಯಯೋಗವನ್ನು ಒಪ್ಪುವುದಿಲ್ಲವೊ ಅವರು ವ್ಯಕ್ತಿ ಸ್ವಾತಂತ್ರ್ಯವನ್ನೂ ಒಪ್ಪುವುದಿಲ್ಲ. ಅಂಥವರು ಆಳವಾದ ವಿಚಾರ ಮಾಡಿದಲ್ಲಿ ಮಾನವನ ಸುಖ ಯಾವುದೇ ಪ್ರಕಾರದ ವಾದಗಳಿಂದ ಪ್ರಾಪ್ತವಾಗುವುದಿಲ್ಲ. ಎಲ್ಲಿಯವರೆಗೆ ವ್ಯಕ್ತಿ ಆತ್ಮವಿಕಾಸ ಮಾಡಿಕೊಳ್ಳುವ ಸ್ವಾತಂತ್ರ್ಯ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಸುಖ ಸಿಗುವುದಿಲ್ಲವೆಂಬ ವಿಚಾರ ವಿವಿಧ ಪ್ರಣಾಳಿಯರಿಗೆ ತಿಳಿಯುತ್ತದೆ.

ಮುಂದುವರೆಯುವದು.......

ನೈರ್ಮಲ್ಯ ಮತ್ತು ವೃಕ್ಷಾಭಿವೃದ್ಧಿಗಾಗಿ ಜನಾಂದೋಲನ

-ಪಿ.ಎಸ್.ಚಂದ್ರಣ್ಣ ಮತ್ತು ಪಾರ್ವತಮ್ಮ

ದೇಶದ ಜನಜೀವನದಲ್ಲಿ ಮತ್ತು ಆಡಳಿತದಲ್ಲಿ ಸದಾಚಾರದ ಬದಲು ಭ್ರಷ್ಟಾಚಾರ ವ್ಯಾಪಿಸಿರುವುದು ಒಂದು ಸಮಸ್ಯೆಯಾದರೆ, ಭೂಮಿಯ ಮೇಲೆ ಅಭಿವೃದ್ಧಿಯ ನೆಪದಲ್ಲಿ ತ್ಯಾಜ್ಯ ವಸ್ತುಗಳ ಸಂಗ್ರಹ ಮತ್ತು ಮರಗಳ ಸತತ ಹನನ ನಡೆಯುತ್ತಿರುವುದು ಇನ್ನೊಂದು ಸಮಸ್ಯೆ. ಮಾನವ ನಿರ್ಮಿತ ಈ ಎರಡು ಸಮಸ್ಯೆಗಳಿಂದ ಮಾನವ ಸತಃ ಅಗಣಿತ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು ಈ ಸಮಸ್ಯೆಗಳನ್ನು ಬಗೆಹರಿಸಲಾರದವುಗಳಾಗಿವೆ. ಬದಲಿಗೆ ಇವು ಪರಿಸರ ಮಾಲಿನ್ಯಕ್ಕೂ, ಹವಾಮಾನದಲ್ಲಿಯ ವೈಪರಿತ್ಯಕ್ಕೂ ಕಾರಣವಾಗುತ್ತಿವೆ. ಸಮಸ್ಯೆಯ ಉಲ್ಬಣಕ್ಕೆ ತಂತ್ರಜ್ಞಾನ ಮತ್ತು ವಿಜ್ಞಾನ ಕೈಜೋಡಿಸಿರುವುದರಿಂದ ಸಮಸ್ಯೆ ಇನ್ನೂ ಗಂಭೀರವಾಗುತ್ತಲೇ ಹೋಗುತ್ತಿದೆ. ಆದ್ದರಿಂದ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಅವಲಂಬಿಸದೇ ಮಾನವ ತನಗೆ ದೈವದತ್ತವಾಗಿರುವ ದೇಹಶ್ರಮ ಮತ್ತು ಬುದ್ಧಿಬಲದಿಂದ ಭ್ರಷ್ಟಾಚಾರ ಮತ್ತು ಪರಿಸರ ನಾಶದ ಸಮಸ್ಯೆಯನ್ನು ಬಗೆಹರಿಸ ಬೇಕಾಗಿದೆ. ಇದಕ್ಕೆ ಇರುವ ಒಂದೇ ಮಾರ್ಗ ದೈವಿಕೃಪೆಯೊಂದಿಗೆ ಪುರುಷ್ಯಪ್ರಯತ್ನ. ಸಕಾರಾತ್ಮಕ ಪುರುಷಪ್ರಯತ್ನಕ್ಕೆ ದೈವಿಕೃಪೆಯಾಗುವುದರಲ್ಲಿ ಸಂದೇಹವಿಲ್ಲ. ಈ ವಿಚಾರದೊಂದಿಗೆ ೧೯೯೫ರಲ್ಲಿ ಮೈಸೂರು ನಗರದಲ್ಲಿ ನೈರ್ಮಲ್ಯ ಮತ್ತು ವೃಕ್ಷಾಭಿವೃಧಿಗಾಗಿ ಜನಾಂದೋಲನವನ್ನು ಪ್ರಾರಂಭಿಸಲು ನೈರ್ಮಲ್ಯ ಮತ್ತು ವೃಕ್ಷಾಭಿವೃದ್ಧಿ ಟ್ರಸ್ಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆ ಪ್ರಾರಂಭವಾಗಿ ಇಂದಿಗೆ ೨೦ ವರ್ಷಗಳಾದವು. ಈ ಸಂದರ್ಭದಲ್ಲಿ ನೈರ್ಮಲ್ಯ ಮತ್ತು ವೃಕ್ಷಾಭಿವೃದ್ಧಿ ಆಂದೋಲನ ನಡೆದುಬಂದ ದಾರಿಯ ಸಿಂಹಾವಲೋಕನ ಮಾಡಿ ಮತ್ತು ಮುಂದೆ ನಡೆಯಬೇಕಾದ ದಾರಿಯನ್ನು ವೀಕ್ಷಿಸುವದು ಅಗತ್ಯವಾಗಿದೆ. ಈ ೨೦ ವರ್ಷಗಳಲ್ಲಿ ಆದ ಕೆಲಸಗಳು ಇರುವ ಬ್ರಹತ್ ಸಮಸ್ಯೆಯ ಎದುರಿಗೆ ಬಹಳ ಅಲ್ಪವೆಂದು ಖಂಡಿತವಾಗಿ ತೋರುತ್ತದೆ. ಆದರೆ ಈ ಅಲ್ಪವೇ ಕ್ರಮೇಣ ಹೆಮ್ಮರವಾಗಿ ಬೆಳೆಯುವ ಸೂಚನೆಗಳು ಕಂಡುಬರುತ್ತಿವೆ ಎಂಬುದು ಸಮಾಧಾನಕರ ಸಂಗತಿಯಾಗಿದೆ. ಇಂತಹ

ಆಂದೋಲನ ಕೇವಲ ಮೈಸೂರು ಅಥವಾ ಇನ್ನಿತರ ನಗರಗಳಿಗೆ ಮಾತ್ರ ಸೀಮಿತವಾಗಿದೇ ರಾಜ್ಯದ ಎಲ್ಲೇಡೆಯೂ ನಡೆಯುವಂತಾಗಬೇಕು ಮತ್ತು ನಿಖಿಲ್ ಕರ್ನಾಟಕ ನೈರ್ಮಲ್ಯತೆಯಿಂದಲೂ ವಿವಿಧ ಬಗೆಯ ವೃಕ್ಷಗಳಿಂದಲೂ ಕಂಗೊಳಿಸುವಂತಾಗಬೇಕು ಮತ್ತು ಕರ್ನಾಟಕದ ಪರಿಸರ ಹಾಗೂ ಹವಾಮಾನ ಎಲ್ಲ ಋತುಗಳಲ್ಲಿಯೂ ಆಲ್ಹಾದಕರವಾಗಿರಬೇಕೆಂಬುದು ಈ ಆಂದೋಲನದ ಆಶಯವಾಗಿದೆ. ೨೦ ವರ್ಷಗಳ ಹಿಂದೆ ಪ್ರಾರಂಭಿಸಿದ ಸಣ್ಣ ಈ ನೈರ್ಮಲ್ಯದ ಆಂದೋಲನದ ಪರಿಣಾಮವಾಗಿ ಇಂದು ಮೈಸೂರು ನಗರ ದೇಶದಲ್ಲಿ ಎರಡನೆಯ ಸ್ವಚ್ಛನಗರವೆಂಬ ಪ್ರಶಸ್ತಿಯನ್ನು ಪಡೆಯಲು ಸಾಧ್ಯವಾಯಿತ್ತೆಂದು ಹೇಳಲು ಸಂತೋಷವಾಗುತ್ತದೆ.

ಮಹಾತ್ಮ ಗಾಂಧೀಜಿಯವರು ಭಾರತ ಸ್ವಾತಂತ್ರ್ಯ ಪಡೆಯುವದು ಎಷ್ಟು ಮುಖ್ಯವೋ ಅದಕ್ಕಿಂತಲೂ ಹೆಚ್ಚು ಮುಖ್ಯವಾದುದು ದೇಶದಲ್ಲಿಯ ಬಡತನ, ರೈತದಲ್ಲಿರುವ ನೀರುದ್ಯೋಗತನ, ಗ್ರಾಮಗಳಲ್ಲಿರುವ ಮಾಲಿನ್ಯತೆ, ನೀರಕ್ಷರತೆ, ಸ್ತ್ರೀಶೋಷಣೆ, ಮದ್ಯಪಾನ, ಅಸ್ಪೃಶ್ಯತೆ ಇವುಗಳ ನಿವಾರಣೆ ಅತೀಮುಖ್ಯವೆಂದು ಭಾವಿಸಿದರು. "ನಾನು ದೇಶದ ಸ್ವಾತಂತ್ರ್ಯಕಿಂತ ಮೊದಲು ಅಸ್ಪೃಶ್ಯತೆ ನಿವಾರಣೆಯಾಗಬೇಕೆಂದು ಬಯಸುತ್ತಾನೆ ಎಂಬುದಾಗಿ ಗಾಂಧೀಜಿ ೧೯೩೨ರಲ್ಲಿಯೇ ೨ನೇ ದುಂಡುಮೇಜಿನ ಪರೀಷತ್ತಿನಲ್ಲಿ ಹೇಳಿದ್ದರು. ಮೇಲ್ಕಾಣಿಸಿದ ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ಗಂಧೀಜಿ ೧೮ ಪ್ರಕಾರದ ರಚನಾತ್ಮಕ ಕಾರ್ಯಕ್ರಮಗಳನ್ನು ಹೇಳಿದ್ದರು. ಆ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನೈರ್ಮಲ್ಯ ಮತ್ತು ವೃಕ್ಷಾರೋಪಣವು ಸೇರಿ ಕೊಳ್ಳುವೆಂಥ ಕಾರ್ಯಕ್ರಮವಾಗಿವೆ. ನೈರ್ಮಲ್ಯ ಮತ್ತು ವೃಕ್ಷಾಭಿವೃದ್ಧಿ ಆಂದೋಲನ ಎಲ್ಲಕಡೆಗೂ ಬಿರುಸಾಗಿ ನಡೆಯುವಂತೆ ಮಾಡಬೇಕಾದುದು ಈ ಯುಗದ ಕಾಲಧರ್ಮವಾಗಿದೆ.

ಮೋಹದ ಮೇಲೆಯೇ ಗೀತೆಯ ಗದಾಘಾತ

ಅನುವಾದ:- ಸಿದ್ದವನಹಳ್ಳಿ ಕೃಷ್ಣಶರ್ಮ ಲೇ- ವಿನೋಬಾ

ಒಲವಿನ ತಮ್ಮದಿರೆ,

ಇವೊತ್ತಿನಿಂದ ನಾನು ಶ್ರೀಮದ್ ಭಗವದ್ ಗೀತೆಯ ವಿಷಯ ಹೇಳುತ್ತೇನೆ. ಗೀತೆಗೂ ನನಗೂ ಇರುವ ಸಂಬಂಧ ತರ್ಕಕ್ಕೆ ಮೀರಿದ್ದು. ನನ್ನ ಮೈ ತಾಯ ಹಾಲಿನಿಂದ ಬೆಳೆದಿದೆ. ಅದಕ್ಕಿಂತ ಹೆಚ್ಚಾಗಿ ನನ್ನ ಹೃದಯ ಮತ್ತು ಬುದ್ಧಿ ಗೀತೆಯ ಹಾಲಿನಿಂದ ಬೆಳೆದಿದೆ. ಎಲ್ಲಿ ಜೀವಾಳದ ಸಂಬಂಧ ಇರುತ್ತದೋ ಅಲ್ಲಿ ತರ್ಕಕ್ಕೆ ಎಡೆಯಿಲ್ಲ. ತರ್ಕವನ್ನುಳಿದು ಶ್ರದ್ಧೆ-ಪ್ರಯೋಗ ಈ ಎರಡು ರೆಕ್ಕೆಗಳನ್ನು ಕೆದರಿ ಗೀತಾಗಗನದಲ್ಲಿ ನಾನು ಯಥಾಶಕ್ತಿ ವಿಹರಿಸುತ್ತೇನೆ. ಬಹುಶಃ ನಾನು ಗೀತೆಯ ವಾತಾವರಣದಲ್ಲೇ ಇದೇನೆ. ಗೀತೆಯೆಂದರೆ ನನ್ನ ಪ್ರಾಣತತ್ವ. ಗೀತೆಯ ಬಗ್ಗೆ ಯಾರಿಗಾದರೂ ನಾನು ಹೇಳಿದರೆ ಆಗ ಗೀತಾಸಮುದ್ರದ ಮೇಲೆ ತೇಲಾಡುತ್ತಿರುತ್ತೇನೆ. ನಾನೊಬ್ಬನೆ ಇದ್ದರೆ ಆ ಅಮೃತದ ಕಡಲಿನಲ್ಲಿ ಆಳವಾಗಿ ಮುಳುಗಿ ಕುಳಿತಿರುತ್ತೇನೆ. ಇಂಥ ಗೀತಾಮಾತೆಯ ಚರಿತ್ರೆಯನ್ನು ಪ್ರತಿ ಭಾನುವಾರ ನಾನು ಹೇಳಬೇಕೆಂದು ನಿರ್ಧರವಾಗಿದೆ.

ಗೀತೆಯನ್ನು ಮಹಾಭಾರತದಲ್ಲಿ ಯೋಜಿಸಿದಾರೆ. ಮಹಾಭಾರತದ ನಟ್ಟನಡುವೆ ಭಾರತದ ಎಲ್ಲೆಡೆಗೂ ಬೆಳಕು ಬೀರುವ ಎತ್ತರವಾದ ದೀಪದಂತೆ ಇದೆ- ಗೀತೆ. ಒಂದು ಕಡೆ ೬ ಪರ್ವ, ಇನ್ನೊಂದು ಕಡೆ ೧೨ ಪರ್ವ, ಇದರ ನಡುವೆ: ಒಂದು ಕಡೆ ೭ ಅಕ್ಷೋಹಿಣೀ ಸೇನೆ, ಇನ್ನೊಂದು ಕಡೆ ೧೧ ಅಕ್ಷೋಹಿಣೀ ಸೇನೆ- ಹೀಗೆ ನಟ್ಟನಡುವೆ ಗೀತೆ ಉಪದೇಶಿತವಾಗುತ್ತದೆ.

ಮಹಾಭಾರತ ರಾಮಾಯಣಗಳು ನಮ್ಮ ರಾಷ್ಟ್ರೀಯ ಗ್ರಂಥಗಳು. ಅವುಗಳಲ್ಲಿ ವರ್ಣಿಸಿದ ವ್ಯಕ್ತಿಗಳು ನಮ್ಮ ಬಾಳಿನಲ್ಲಿ ಐಕ್ಯವಾಗಿದಾರೆ. ರಾಮ-ಸೀತೆ, ಧರ್ಮರಾಯ-ದ್ರೌಪದಿ, ಭೀಷ್ಮ-ಹನುಮಂತರೇ ಮೊದಲಾದವರು ಸಾವಿರಾರು ವರ್ಷಗಳಿಂದ ಸಮಸ್ತ ಭಾರತೀಯ ಜೀವನದ ಮನ ಸೆಳೆದಿದ್ದಾರೆ. ಜಗತ್ತಿನ ಇತರ ಮಹಾಕಾವ್ಯಗಳ ಪಾತ್ರಗಳು ಯಾವುವೂ ಹೀಗೆ ಜನಜೀವನದಲ್ಲಿ ಬೆರೆತುಹೋದಂತೆ ಕಾಣುವುದಿಲ್ಲ. ಈ ದೃಷ್ಟಿಯಿಂದ ಮಹಾಭಾರತ ರಾಮಾಯಣಗಳು ನಿಸ್ಸಂದೇಹವಾಗಿ ಅದ್ಭುತ ಗ್ರಂಥಗಳು. ರಾಮಾಯಣ ಮಧುರ ನೀತಿಕಾವ್ಯ, ಮಹಾಭಾರತ ವ್ಯಾಪಕ ಸಮಾಜಶಾಸ್ತ್ರ, ವ್ಯಾಸರು ಒಂದು ಲಕ್ಷ ಸಂಹಿತೆಯನ್ನು ಬರೆದು, ಅಸಂಖ್ಯ ಚಿತ್ರಗಳನ್ನು ಚರಿತ್ರೆಗಳನ್ನು

ಚಾರಿತ್ರ್ಯಗಳನ್ನು ಬಹು ಕೌಶಲದಿಂದ ಯಥಾವತ್ ರೂಪಿಸಿದಾರೆ. ಲೋಕದಲ್ಲಿ ಕೇವಲ ನಿರ್ದೋಷವಾದುದೆಂದರೆ ದೇವರೊಬ್ಬನೇ ಹಾಗೆಯೇ ಬರೀ ದೋಷಪೂರ್ಣವಾದುದು ಯಾವುದೂ ಇಲ್ಲ. ಇದನ್ನು ಮಹಾಭಾರತ ಸ್ಪಷ್ಟವಾಗಿ ತಿಳಿಸುತ್ತದೆ. ಭೀಷ್ಮ ಯುಧಿಷ್ಠಿರರಂಥವರಲ್ಲಿಯೂ ದೋಷಗಳನ್ನು ತೋರಿಸಲಾಗಿದೆ. ಇದಕ್ಕೆ ಪ್ರತಿಯಾಗಿ ಕರ್ಣ ದುರ್ಯೋಧನರ ಗುಣವನ್ನೂ ಪ್ರಕಟಿಸಿದ್ದಾರೆ. ಮಾನವನ ಬಾಳು ಕರಿ ಬಿಳಿ ದಾರಗಳಿಂದ ನೇದ ಬಟ್ಟೆ ಎಂಬುದನ್ನು ಮಹಾಭಾರತ ನಿಚ್ಚಳಮಾಡಿ ತಿಳಿಸುತ್ತದೆ. ತಾವು ಅಲಿಪ್ತರಾಗಿದ್ದು ಭಗವಾನ್ ವ್ಯಾಸರು ಈ ವಿರಾಟ ಪ್ರಪಂಚದ ನೆರಳು ಬೆಳಕಿನ ಚಿತ್ರವನ್ನು ತೋರಿಸಿದ್ದಾರೆ. ವ್ಯಾಸರ ಈ ಅಲಿಪ್ತ ಉದಾತ್ತ ಗ್ರಂಥ ರಚನಾಕೌಶಲದಿಂದ ಮಹಾಭಾರತ ಬಂಗಾರದ ಗಣಿಯಾಗಿದೆ. ಸೋಸಿ ತೆಗೆದು ತೆಕ್ಕತುಂಬಾ ಬಂಗಾರವನ್ನು ಒಯ್ಯಬಹುದು.

ವ್ಯಾಸರು ಇಂಥ ಮಹಾಭಾರತವನ್ನೇನೋ ಬರೆದರು. ಆದರೆ ಅದರ ಸಂದೇಶ ಎಂದು ಹೇಳಬೇಕಾದುದು ಅವರಿಗೆ ಏನೂ ಇರಲಿಲ್ಲವೆ? ತಮ್ಮದು ಈ ಉಪದೇಶ ಎಂದು ಎಲ್ಲಾದರೂ ಹೇಳಿದಾರೆಯೇ? ವ್ಯಾಸರಿಗೆ ಎಲ್ಲಿ ಸಮಾಧಿ ಬಂದಿದೆ. ಬೇರೆ ಬೇರೆ ಕಡೆ ಹೊರೆಹೊರೆಯಾಗಿ ತತ್ವಜ್ಞಾನ ಮಹಾಭಾರತದಲ್ಲೆಲ್ಲಾ ಬಂದಿದೆ. ಆದರೆ ಈ ಎಲ್ಲ ತತ್ವಜ್ಞಾನದ ಉಪದೇಶದ ಸಾರಸರ್ವಸ್ವವನ್ನು ಎಲ್ಲಾದರೂ ಒತ್ತಟ್ಟಗೆ ವ್ಯಾಸರು ಇಟ್ಟಿಲ್ಲವೆ? ಇಟ್ಟಿದಾರೆ. ಸಮಗ್ರ ಭಾರತದ ನವನೀತವನ್ನು ವ್ಯಾಸರು ಭಗವದ್ಗೀತೆಯಲ್ಲಿ ಕೊಟ್ಟಿದ್ದಾರೆ. ಗೀತೆ ವ್ಯಾಸರ ಮುಖ್ಯ ಉಪದೇಶ, ಅವರ ಮನನದ ಸಾರಸಂಗ್ರಹ. ಇದರಿಂದಲೇ 'ಮುನೀನಾಮಪಿ ಅಹಂ ವ್ಯಾಸಃ' ಎಂದು ವಿಭೂತಿಯೋಗದಲ್ಲಿ ಅರ್ಥಪೂರ್ಣವಾಗಿ ಹೇಳಿದೆ. ಪ್ರಾಚೀನಕಾಲದಿಂದಲೂ ಗೀತೆಗೆ ಉಪನಿಷತ್ತು ಎಂಬ ಗೌರವಸಂದಿದೆ. ಗೀತೆ ಉಪನಿಷತ್ತು . ಸರ್ವ ಉಪನಿಷತ್ತುಗಳನ್ನು ಹಿಂಡಿ ಗೀತಾರೂಪದಲ್ಲಿ ಆ ಹಾಲನ್ನು ಭಗವಂತ ಲೋಕಕ್ಕೆ ನೀಡಿದಾನೆ. ಅರ್ಜುನ ಬರೀ ನಿಮಿತ್ತ ಮಾತ್ರ. ಬಾಳಿನ ವಿಕಾಸಕ್ಕೆ ಅಗತ್ಯವಾದ ಪ್ರತಿಯೊಂದು ವಿಚಾರವೂ ಬಹುಶಃ ಗೀತೆಯಲ್ಲಿ ಬಂದೇ ಇದೆ. ಆದುದರಿಂದಲೇ ಗೀತೆ ಧರ್ಮಜ್ಞಾನದ ಕೋಶ ಎಂದು ಅನುಭವಿಗಳು ಯಥಾರ್ಥವಾಗಿ ಹೇಳಿದ್ದಾರೆ. ಗೀತೆ ಚಿಕ್ಕದು ಆದರೆ ಹಿಂದೂ ಧರ್ಮದ ಮುಖ್ಯ ಗ್ರಂಥ!

ಗೀತೆಯನ್ನು ಹೇಳಿದುದು ಶ್ರೀಕೃಷ್ಣ. ಇದು ಎಲ್ಲರಿಗೂ ಗೊತ್ತಿದೆ. ಈ ಮಹಾ ಉಪದೇಶ ಪಡೆದ ಭಕ್ತ ಅರ್ಜುನ ಅದರಲ್ಲಿ ಬೆರೆತುಹೋದ. ಅಂತೇ ಅವನಿಗೂ ಕೃಷ್ಣ ಎಂಬ ಹೆಸರು ಬಂತು. ಭಗವಂತ-ಭಕ್ತರ ಹೃದ್ಗತವನ್ನು ಪ್ರಕಟಪಡಿಸುವಾಗ ವ್ಯಾಸದೇವ ಪೂರಾ ಕರಗಿ ಹೋಗಿದಾನೆ. ಲೋಕ ಆತನನ್ನೂ ಕೃಷ್ಣನೆಂದು ಕರೆವಷ್ಟು ಮಟ್ಟಗೆ ಆಗಿದೆ. ಹೇಳುವವನು ಕೃಷ್ಣ, ಕೇಳುವವನು ಕೃಷ್ಣ,

ಕಟ್ಟುವವನು ಕೃಷ್ಣ– ಹೀಗೆ ಮೂವರಲ್ಲೂ ಒಂದೇ ಅದ್ವೈತ ಮೂಡಿತು. ಮೂವರಿಗೂ ಸಮಾಧಿ ಹತ್ತಿತು. ಗೀತೆಯನ್ನು ಅಭ್ಯಸಿಸುವಾಗ ಇಂಥದೇ ಏಕಾಗ್ರತೆ ಬೇಕು.

ಗೀತೆ ಎರಡನೆಯ ಅಧ್ಯಾಯದಿಂದ ಮೊದಲಾಗಬೇಕಿತ್ತು ಎಂದು ಎಷ್ಟೋ ಜನರಿಗೆ ಅನಿಸುತ್ತದೆ. ಎರಡನೆಯ ಅಧ್ಯಾಯದ ೧೧ನೇ ಶ್ಲೋಕದಿಂದ ಪ್ರತ್ಯಕ್ಷ ಉಪದೇಶ ಪ್ರಾರಂಭವಾಗುತ್ತದೆ. ಅಲ್ಲಿಂದಲೇ ಗೀತೆ ಪ್ರಾರಂಭ ಎಂದರೆ ಏನು ತಪ್ಪು? ನನಗೊಬ್ಬರು ಹೇಳಿದರು: "ಅಕ್ಷರಗಳಲ್ಲಿ ಆಕಾರವೇ ಈಶ್ವರೀ ವಿಭೂತಿ ಎಂದು ದೇವರು ಹೇಳಿದಾನೆ. 'ಅಶೋಚ್ಯಾ ನನ್ವ ಶೋಚಸ್ತ್ವಂ' ಎಂಬ ಶ್ಲೋಕದ ಆದಿಯಲ್ಲೂ ಆಕಾರವಿದೆ. ಆದ್ದರಿಂದ ಅಲ್ಲಿಂದಲೇ ಗೀತೆ ಪ್ರಾರಂಭವಾಗಿದೆ." ಈ ತರ್ಕವನ್ನು ತಳ್ಳಿಹಾಕಿದರೂ ಇಲ್ಲಿ ಗೀತೆ ಆರಂಭ ಎಂಬುದು ಅನೇಕ ದೃಷ್ಟಿಗಳಿಂದ ಗಮನೀಯವಾಗಿದೆ. ಆದರೆ ಅದಕ್ಕೆ ಹಿಂದಿನ ಪ್ರಾಸ್ತಾವಿಕ ಭಾಗವೂ ಮಗತ್ವದ್ದೇ. ಅರ್ಜುನ ಯಾವ ಮನೋಭಾವದಲ್ಲಿ ಇದಾನೆ, ಯಾವ ಮಾತನ್ನು ಹೇಳಲು ಗೀತೆ ಹುಟ್ಟಿತು, ಅದನ್ನು ಆ ಪ್ರಾಸ್ತಾವಿಕ ಕಥಾಭಾಗ ಓದದೆ ಸರಿಯಾಗಿ ಅರಿಯುವುದು ಕಷ್ಟ.

ಅರ್ಜುನ ಕ್ಲೈಬ್ಯವನ್ನು ಕಳೆದು, ಅವನನ್ನು ಯುದ್ಧಪ್ರವೃತ್ತನನ್ನಾಗಿ ಮಾಡಲು ಗೀತೆ ಹೇಳಲ್ಪಟ್ಟಿತು ಎಂದು ಕೆಲವರು ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಗೀತೆ ಕರ್ಮಯೋಗವನ್ನು ಮಾತ್ರ ಹೇಳುವಂಥವಲ್ಲ; ಯುದ್ಧ ಯೋಗವನ್ನು ಹೇಳುವಂಥದು. ವಿಚಾರ ಮಾಡಿದರೆ ಈ ಮಾತಿನಲ್ಲಿರುವ ತಪ್ಪು ಕಾಣಬರುತ್ತದೆ. ೧೮ ಅಕ್ಷೋಹಿಣೀ ಸೇನೇ ಯುದ್ಧಸನ್ನದ್ಧವಾಗಿದೆ. ಇಡೀ ಗೀತೆಯನ್ನು ಅರ್ಜುನನಿಗೆ ಹೇಳಿ, ಅವನನ್ನು ಆ ಸೇನೆಗೆ ಯೋಗ್ಯನನ್ನಾಗಿ ಕೃಷ್ಣ ಮಾಡಿದ ಎಂದೇ ಅಭಿಪ್ರಾಯ? ಅರ್ಜುನ ಹೆದರಿದ, ಆ ಸೇನೆ ಹೆದರಲಿಲ್ಲ. ಇದರಿಂದ ಅರ್ಜುನನಿಗೆ ಆ ಸೇನೆ ಹೆಚ್ಚು ಯೋಗ್ಯವಾದುದು ಎನ್ನೋಣವೆ? ಆ ಕಲ್ಪನೆಯ ಬಾರದು, ಅರ್ಜುನ ಯುದ್ಧ ಮಾಡಲು ಹಿಂಜರಿದ. ಆದರೆ ಅಂಜಿ ಅಲ್ಲ. ನೂರಾರು ಯುದ್ಧಮಾಡಿದ ಮಹಾವೀರ ಅವನು. ಉತ್ತರ ಗೋಗ್ರಹಣದಲ್ಲಿ ಭೀಷ್ಮ ದ್ರೋಣ ಕರ್ಣರನ್ನು ಒಬ್ಬನೇ ಸೋಲಿಸಿದ್ದ. ಸದಾ ವಿಜಯವಂತ, ನರರಲ್ಲಿ ನಿಜವಾದ ನರ ಇವನೇ ಎಂಬ ಕೀರ್ತಿಯಿತ್ತು. ಅವನ ರೋಮರೋಮದಲ್ಲೂ ವೀರವೃತ್ತಿ ತುಳುಕುತ್ತಿತ್ತು ಅರ್ಜುನನನ್ನು ಹೀನೈಸಲಿಕ್ಕೆಂದು ಕೆಣಕಲೆಂದು ಶ್ರೀಕೃಷ್ಣನೇ ಮೊಟ್ಟ ಮೊದಲು ಈ ಕ್ಲೈಬ್ಯದ ಆರೋಪವನ್ನು ಹೊರಿಸಿದವನು. ಆ ಬಾಣ ಗುರಿಗೆ ತಾಕಲಿಲ್ಲವೆಂದು ಬೇರೆ ದಾರಿ ತೆಗೆದು ಜ್ಞಾನ ವಿಜ್ಞಾನದ ಬಗ್ಗೆ ಅನೇಕ ವ್ಯಾಖ್ಯಾನ ಮಾಡತೊಡಗಿದ. ಹೀಗಿರುವಾಗ ಅವನ ಕ್ಲೈಬ್ಯನಿರಸನ_ಇಷ್ಟು ಸುಲಭ ತಾತ್ಪಾರ್ಯ ಗೀತೆಯದಲ್ಲ ಎಂಬುದು ನಿಶ್ಚಿತ.

ಇನ್ನು ಕೆಲವರು ಹೇಳುತ್ತಾರೆ: ಅರ್ಜುನನ ಅಹಿಂಸಾವೃತ್ತಿಯನ್ನು ಕಳೆದು

ಅವನನ್ನು ಯುದ್ಧಪ್ರವೃತ್ತನನನ್ನಾಗಿ ಮಾಡಲು ಗೀತೆ ಹೇಳಲ್ಪಟ್ಟಿತು. ಇದೂ ಸರಿಯಲ್ಲವೆಂದು ನನಗನಿಸುತ್ತದೆ. ಇದನ್ನು ತಿಳಿಯಲು ಅರ್ಜುನನ ಮನೋಧರ್ಮವನ್ನು ಪರಿಶೀಲಿಸಬೇಕು. ಇದಕ್ಕೆ ಗೀತೆಯ ಮೊದಲನೆ ಅಧ್ಯಾಯವೂ ಎರಡನೆಯದರೊಳಗೆ ಹೊಕ್ಕಿರುವ ಆ ಭಾಗವೂ ಅತ್ಯಂತ ಪ್ರಯೋಜನಕಾರಿ.

ಅರ್ಜುನ ರಣಾಂಗಣದಲ್ಲಿ ಬಂದು ನಿಂತಾಗ ಕೃತನಿಶ್ಚಯನಾಗಿ ಕರ್ತವ್ಯ ಭಾವನೆಯುಳ್ಳವನಾಗಿ ಬಂದು ನಿಂತ. ಅವನ ಸ್ವಭಾವದಲ್ಲಿಯೇ ಇತ್ತು ಕ್ಷಾತ್ರವೃತ್ತಿ ಯುದ್ಧವನ್ನು ತಡೆಯಲು ಸರ್ವಪ್ರಯತ್ನ ಮಾಡಿದರೂ ಅದು ತಪ್ಪಲಿಲ್ಲ. ತೀರಾ ಕಡಿಮೆ ಬೇಡಿಕೆ, ಕೃಷ್ಣನಂಥವನ ಮಧ್ಯಸ್ಥಿಕೆ, ಎರಡೂ ವ್ಯರ್ಥವಾದವು. ಅಂಥ ಸಂದರ್ಭದಲ್ಲಿ ದೇಶದೇಶದ ರಾಜರನ್ನು ಕಲೆಹಾಕಿ, ಕೃಷ್ಣನನ್ನು ಸಾರಥಿಯಾಗಿ ಪಡೆದು ತಂದು, ರಣಾಂಗಣದಲ್ಲಿ ನಿಂತು ಅರ್ಜುನ ವೀರವೃತ್ತಿಯ ಹುರುಪಿನಿಂದ ಕೃಷ್ಣನಿಗೆ ಹೇಳುತ್ತಾನೆ: 'ಎರಡೂ ಸೇನೆಯ ನಡುವೆ ನನ್ನ ರತವನ್ನು ನಿಲ್ಲಿಸು. ನನ್ನೊಡನೆ ಯುದ್ಧ ಮಾಡಲು ಯಾರು ಯಾರು ಬಂದು ಸೇರಿದ್ದಾರೋ ಅವರ ಮೋರೆಗಳನ್ನಾದರೂ ಒಮ್ಮೆ ನೋಡುತ್ತೇನೆ.' ಕೃಷ್ಣ ಅವನು ಹೇಳಿದಂತೆ ಮಾಡುತ್ತಾನೆ. ಅರ್ಜುನ ನಾಲ್ಕೂ ಕಡೆಗೂ ಕಣ್ಣು ಹೊರಳಿಸಿ ನೋಡುತ್ತಾನೆ. ಅಲ್ಲಿ ಅವನಿಗೆ ಕಂಡದ್ದೇನು? ಎರಡು ಕಡೆ ತನ್ನ ಅಣ್ಣ ತಮ್ಮಂದಿರ, ಬಂಧುಬಳಗದ ಪ್ರಚಂಡ ಸಮೂಹ ಸೇರಿದೆ. ತಾತ, ತಂದೆ, ಮಕ್ಕಳು, ಮೊಮ್ಮಕ್ಕಳು, ಹೀಗೆ ನಾಲ್ಕು ತಲೆಮಾರಿನ ಜನ ಮರಣ-ಮಾರಣದ ಕೊನೆಯ ನಿರ್ಧಾರ ಮಾಡಿ ಸೇರಿದಂತೆ ಅವನಿಗೆ ಕಾಣುತ್ತದೆ. ಅದಕ್ಕೆ ಮೊದಲು ಅವನಿಗೆ ಈ ಚಿತ್ರ ಹೊಳೆದಿರಲಿಲ್ಲವೆಂದಲ್ಲ. ಆದರೆ ಕಣ್ಣಾರೆ ಕಂಡಾಗ ಅದರ ಪರಿಣಾಮವೇ ಬೇರೆ. ಈ ಸ್ವಜನ ಸಮೂಹವನ್ನು ನೋಡಿ ಅವನ ಎದೆ ತಳಮಳಿಸಿ ಹೋಯಿತು. ಅವನಿಗೆ ಬಹಳ ಕೆಡುಕು ಎನಿಸಿತು. ಅಂದಿನವರೆಗೆ ಅವನು ಎಷ್ಟೋ ಯುದ್ಧ ಮಾಡಿದ್ದ, ಎಷ್ಟೋ ವೀರರನ್ನು ಕೊಂದಿದ್ದ. ಆಗ ಅವನಿಗೆ ಕೆಡುಕೆನಿಸಿರಲಿಲ್ಲ, ಅವನ ಗಾಡೀವ ಜಾರಿ ಬೀಳಲಿಲ್ಲ, ಅವನ ಮೈ ನಡುಗಲಿಲ್ಲ, ಅವನ ಕಣ್ಣು ತೇವವಾಗಲಿಲ್ಲ. ಅಂಥದು ಈಗೇನು ಬಂತು? ಈಗ ಹೀಗೇಕೆ? ಅಶೋಕನ ಹಾಗೆ ಇವನಲ್ಲೂ ಅಹಿಂಸೆಯ ಉದಯವಾಯಿತೆ? ಇಲ್ಲ. ಇವೆಲ್ಲಾ ಸ್ವಜನಾಶಕ್ತಿ. ತನ್ನಿದಿರಿನಲ್ಲಿ ಇದೇ ಗಳಿಗೆಯಲ್ಲಿ ಗುರು-ಬಂಧು ಬಳಗ ಅಲ್ಲದೆ ಬೇರೆ ವೈರಿಗಳಿದ್ದಿದ್ದರೆ ಅವರ ತಲೆಯನ್ನು ನಿಸ್ಸಂಕೋಚವಾಗಿ ಅವನು ಚಂಡಾಡುತ್ತಿದ್ದ. ಆದರೆ ಆಸಕ್ತಿ ಜನ್ಯ-ಮೊಹ ಅವನ ಕರ್ತವ್ಯನಿಷ್ಠೆಯನ್ನು ನುಂಗಿತು. ಸಾಲದುದಕ್ಕೆ ತತ್ವಜ್ಞಾನದ ನೆನಪಾಯಿತು. ಕರ್ತವ್ಯ ನಿಷ್ಠ ಮನುಷ್ಯ ಮೋಹಗ್ರಸ್ಥನಾದರೂ ಪೂರ್ಣ ಕರ್ತವ್ಯಭ್ರಷ್ಟನಾಗುವುದು ಅವನ ಮನಸ್ಸಿಗೆ ಒಗ್ಗದು. ಅದಕ್ಕೆ ಅವನು ಯಾವುದಾದರೂ ಒಂದು ಸದ್ವಿಚಾರದ ಮುಸುಕು ಹಾಕುತ್ತಾನೆ. ಅರ್ಜುನನದೂ ಹೀಗೆ ಆಯಿತು. ಯುದ್ಧವೇ ಮೂಲತಃ ಪಾಪಕಾರ್ಯ

ಎಂದು ಅರ್ಜುನ ಸುಳ್ಳುವಾದ ಮಾಡತೊಡಗಿದ. ಯುದ್ಧದಿಂದ ಕುಲಕ್ಷಯವಾದೀತು, ಧರ್ಮ ಲೋಪಿಸೀತು, ಸ್ವೈರಾಚಾರ ಹರಡೀತು. ವ್ಯಭಿಚಾರ ಹಬ್ಬೀತು, ಬರಗಾಲ ಕವಿದೀತು, ಸಮಾಜ ಸಂಕಟದಲ್ಲಿ ಮುಳುಗೀತು–ಹೀಗೆ ಏನೇನೋ ಹೇಳಿ ಶ್ರೀಕೃಷ್ಣನನ್ನು ಒಪ್ಪಿಸಲು ಪ್ರಯತ್ನಿಸಿದ.

ಇಲ್ಲಿ ನನಗೊಬ್ಬ ನ್ಯಾಯಾಧೀಶನ ಸಂಗತಿ ನೆನಪಾಗುತ್ತದೆ. ಒಬ್ಬ ನ್ಯಾಯಾಧೀಶ ಇದ್ದ. ನೂರಾರು ಅಪರಾಧಿಗಳಿಗೆ ಅವನು ಮರಣ ಶಿಕ್ಷೆ ಕೊಟ್ಟಿದ್ದ ಒಂದು ದಿನ ಅವನ ಮಗನನ್ನೇ ಕೊಲೆಗಡಿಕ ಎಂದು ಹಿಡಿದು ತಂದು ಇವನ ಇದಿರಿಗೆ ನಿಲ್ಲಿಸಿದರು. ಅವನ ಮೇಲೆ ಅಪರಾಧ ಸಿದ್ಧವಾಗಿ ತಾನೆ ಅವನಿಗೆ ಶಿಕ್ಷೆ ಕೊಡಬೇಕಾದ ಪ್ರಸಂಗ ಬಂತು, ಆಗ ಆ ನ್ಯಾಯಾಧೀಶ ಹಿಂತುಳಿದ. ಬುದ್ಧಿವಾದ ಹೇಳತೊಡಗಿದ : 'ಮರಣ ಶಿಕ್ಷೆ ಕೇವಲ ಅಮಾನುಷವಾದುದು. ಇಂಥ ಶಿಕ್ಷೆ ಕೊಡುವುದು ಮನುಷ್ಯನಿಗೆ ಭೂಷಣವಲ್ಲ, ಅಪರಾಧಿ ಇಂದಲ್ಲ ನಾಳೆ ಉತ್ತಮನಾದನೆಂಬ ಆಸೆಯನ್ನು ಇದು ಚಿವುಟ ಹಾಕುತ್ತದೆ. ಕೊಲೆ ಮಾಡಿದವನು ಭಾವನಾವಶನಾಗಿ ಉದ್ರೇಕದಲ್ಲಿ ಕೊಲೆ ಮಾಡಿದ. ಆದರೆ ಅವನ ಕಣ್ಣೊಳಗಿನ ಕೆಂಪು ಇಳಿದ ಮೇಲೆ ಅವನನನ್ನು ಗಲ್ಲಿಗೆ ನೇತುಹಾಕಿ ಕೊಲ್ಲುವುದು ಮಾನವತ್ವಕ್ಕೇ ಕಳಂಕ, ನಾಚಿಕೆಕೇಡು.' ಇತ್ಯಾದಿಯಾಗಿ ನ್ಯಾಯಾಧೀಶ ಹೇಳತೊಡಗಿದ. ಮಗ ಇದಿರಿಗೆ ಬಾರದಿದ್ದರೆ ಆ ನ್ಯಾಯಾಧೀಶ ಸಾಯುವ ತನಕ ಮರಣಶಿಕ್ಷೆಯನ್ನು ಸಂತೋಷವಾಗಿ ಕೊಡುತ್ತಲೇ ಇದ್ದ. ಮಗನ ಮೇಲಿನ ಮೊಹದಿಂದ ಹಾಗೆ ಹೇಳಿದ. ಆ ಮಾತು ಒಳಗಿನಿಂದ ಬಂದುದಲ್ಲ. 'ಇವನು ನನ್ನ ಮಗ' ಎಂಬ ಆಸಕ್ತಿಯಿಂದ ಹುಟ್ಟಿದ ಮಾತು.

ಅರ್ಜುನನದೂ ಈ ನ್ಯಾಯಾಧೀಶನ ಗತಿಯಾಯಿತು. ಅವನು ಮಾಡಿದ ತರ್ಕ ತಪ್ಪಲ್ಲ. ಕಳೆದ ಮಹಾಯುದ್ಧದ ತರುವಾಯ ಲೋಕ ಇದೇ ಪರಿಣಾಮವನ್ನು ಕಂಡಿತು. ಆದರೆ ಅರ್ಜುನ ಹೇಳಿದುದು ತತ್ವಜ್ಞಾನವಲ್ಲ, ಪ್ರಜ್ಞಾನವಾದ. ಕೃಷ್ಣನಿಗೆ ಇದು ಗೊತ್ತು. ಅದಕ್ಕೆ ಅವನು ಈ ತರ್ಕಕ್ಕೆ ಗಮನವನ್ನೆ ಕೊಡದೆ ನೇರಾಗಿ ಅವನ ಮೋಹನಾಶದ ಉಪಾಯವನ್ನು ಹುಡುಕಿದ . ಅರ್ಜುನ ನಿಜವಾಗಿಯೂ ಅಹಿಂಸಾವಾದಿಯಾಗಿದ್ದರೆ ಜ್ಞಾನ ವಿಜ್ಞಾನದ ಬಗ್ಗೆ ಯಾರು ಎಷ್ಟೇ ಹೇಳಲಿ ತನ್ನ ಮೂಲ ಪ್ರಶ್ನೆಗೆ ಉತ್ತರ ಸಿಗದೆ ಅವನು ಸುಮ್ಮನಾಗುತ್ತಿರಲಿಲ್ಲ. ಇಡೀ ಗೀತೆಯಲ್ಲಿ ಅರ್ಜುನನ ಈ ಪ್ರಶ್ನೆಗೆ ಉತ್ತರವಿಲ್ಲ. ಅವನಿಗೇನೋ ಸಮಾಧಾನವಾಯಿತು. ಇದೆಲ್ಲದರ ಅರ್ಥ ಇಷ್ಟೆ–ಅರ್ಜುನ ಅಹಿಂಸಾವೃತ್ತಿಯವನಲ್ಲ; ಯುದ್ಧ ಪ್ರವೃತ್ತಿಯವನು. ಯದ್ಧ ಅವನ ದೃಷ್ಟಿಯಿಂದ ಸ್ವಬಾವ ಪ್ರಾಪ್ತ ಹಾಗು ಅಪರಿಹಾರ್ಯ ರೂಪದಲ್ಲಿ ನಿಶ್ಚಿತ ಕರ್ತವ್ಯವಾಗಿತ್ತು. ಮೋಹದಿಂದ ಅವನು ತನ್ನ ಕರ್ತವ್ಯವನ್ನು ಬಿಟ್ಟುಕೊಡಲು ನೋಡಿದ. ಈ ಮೋಹದ ಮೇಲೆಯೇ ಗೀತೆಯ ಗದಾಘಾತ.

ಸಮಾಜವಾದದ ಕನಸುಬಿತ್ತಿದ ಎರಡು ಎಕ್ಕರೆ ಭೂಮಿ

–ಸಲೀಂ ಚೌದರಿ

(ಭೂಮಿಯ ಮಹತ್ವ, ಶಿಕ್ಷಣದ ಪ್ರಾಮುಖ್ಯತೆ, ನಗರವಾಸಿಗರ ಅಂದಿನ ಮನೋಭಾವ, ಮಹಿಳೆಗಿರುವ ಸಾಮಾಜಿಕ ತೊಡಕುಗಳು – ಈ ಎಲ್ಲವನ್ನೂ ಮಾರ್ಮಿಕವಾಗಿ ಚಿತ್ರಿಸಿರುವ ದೃಶ್ಯರೂಪಕ 'ದೋ ಬಿಘಾ ಜಮೀನ್'–ಸಂ)

ಚಿತ್ರದ ಹೆಸರೇ ಸೂಚಿಸುವಂತೆ ಇದು ಭೂಮಿಯ ಜತೆಗೆ ರೈತನ ಸಂಕಷ್ಟಗಳ ಸುತ್ತಲೂ ಸುತ್ತುವ ಕಥೆ. ಕಥಾನಯಕ ಶಂಭು ಮಹತೋ, ಪತ್ನಿ ಪಾರ್ವತಿ, ಮಗ ಕನ್ಹಯ್ಯಾ ಅವರೊಡನೆ ಒಂದು ಕುಗ್ರಾಮದಲ್ಲಿ ಅದೂ ಬರಪೀಡಿತ ಹಳ್ಳಿಯಲ್ಲಿ ವಾಸಿಸುತ್ತಿದ್ದನು. ಕೆಲ ವರ್ಷಗಳ ಕ್ಷಾಮದ ಸಂಕಷ್ಟದ ನಂತರ ಒಂದು ದಿನ ಜೋರಾದ ಮಳೆ ಸುರಿದಾಗ ರೈತರೆಲ್ಲ ಕುಣಿದು ಕುಪ್ಪಳಿಸುತ್ತಾರೆ. ಮತ್ತೆ ಯಥಾಪ್ರಕರ ಒಕ್ಕಲುತನ ಸಾಗುತ್ತದೆ. ಶಂಭುವಿಗೆ ಎರಡು ಎಕರೆ ಜಮೀನು ಇರುತ್ತದೆ. ಅದೊಂದೇ ಆತನ ಆದಾಯದ ಮೂಲ. ಕುಟುಂಬ ನಿರ್ವಹಣೆಗೆ ಇರುವ ಆ ಒಂದೇ ಒಂದು ಆಧಾರದ ಮೇಲೆಯೆ ಶಂಭು ಮಹತೋ ಆತ ಊರಿನ ಜಮೀನ್ದಾರ ಠಾಕುರ್ ಹರನಾಮ್ ಸಿಂಗ್‌ನಿಂದ ಸಾಲ ಪಡೆದಿರುತ್ತಾನೆ.

ಹರನಾಮ್ ಸಿಂಗ್ ದೊಡ್ಡ ಜಮೀನಿನ ಮಾಲೀಕ, ಜಮೀನ್ದಾರ್. ಆತ ಪಟ್ಟಣದಲ್ಲಿರುವ ತನ್ನ ಗೆಳೆಯರೊಂದಿಗೆ ಕೂಡಿಕೊಂಡು ಹಳ್ಳಿಯ ಜಮೀನಿನಲ್ಲಿ ದೊಡ್ಡ ಮಿಲ್ ಕಟ್ಟಲು ನಿರ್ಧರಿಸುತ್ತಾನೆ. ಆತನಿಗಿರುವ ಒಂದೇ ಅಡ್ಡಿ ಎಂದರೆ ತನ್ನ ಜಮೀನಿನ ಮಧ್ಯೆ ಇರುವ ಎರಡು ಎಕರೆ ಜಮೀನು. ಅದು ಶಂಭುವಿನದಾಗಿರುವುದು ಜಮೀನ್ದಾರನಿಗೆ ಸ್ವಲ್ಪ ಕಾಡುತ್ತದೆ. ಏಕೆಂದರೆ ಶಂಭು ಆ ಜಮೀನನ್ನು ಮಾರಲು ಒಪ್ಪದ ಮನುಷ್ಯನೆಂಬ ವಾಸ್ತವ ಗೊತ್ತಿರುತ್ತದೆ. ಜಮೀನ್ದಾರ್ ಮಾತ್ರ ಆ ಭೂಮಿ ಪಡೆದೇ ತೀರಬೇಕೆಂಬ ಪಣ ತೊಟ್ಟಿರುತ್ತಾನೆ. ಅಲ್ಲದೆ ಮಿಲ್ ನಿರ್ಮಾಣಕ್ಕಾಗಿ ಆ ಜಮೀನು ಅತ್ಯವಶ್ಯವಾಗುತ್ತದೆ. ಹೇಗೂ ಶಂಭು ತನ್ನಲ್ಲಿ ಸಾಲ ಪಡೆದಿದ್ದಾನೆ. ಅದೇ ಆಧಾರವಾಗಿಟ್ಟುಕೊಂಡು ಜಮೀನು ಲಪಟಾಯಿಸುವ ಯೋಚನೆಯುಳ್ಳ ಜಮೀನ್ದಾರ್ ಆ ಜಮೀನನ್ನು ತನ್ನದಾಗಿಸಿಕೊಳ್ಳುವ ವಿಶ್ವಾಸ ಹೊಂದಿರುತ್ತಾನೆ.

ಒಂದು ದಿನ ಜಮೀನ್ದಾರ್ ಶಂಭುವನ್ನು ಮನೆಗೆ ಕರೆಕಳಿಸುತ್ತಾನೆ. 'ಆ ಎರಡು ಎಕರೆ ಜಮೀನು ಮಾರಿಬಿಡು. ಸಾಲ ಮರಳಿ ಕೊಡುವುದೇನೂ ಬೇಡ. ಆ ಜಮೀನು ಬರೆದುಕೊಡು' ಎಂದು ಕೇಳುತ್ತಾನೆ. ಅದಕ್ಕೆ ಶಂಭು ಒಪ್ಪುವುದಿಲ್ಲ. ಸಂಸಾರದ ನೊಗ ಸಾಗಲು ಆ ಜಮೀನು ಬೇಕು. ದುಡಿದು ಸಾಲ ಮುಟ್ಟಿಸುತ್ತೇನೆ. ಜಮೀನು

ಮಾತ್ರ ಕೊಡುವುದಿಲ್ಲ ಎನ್ನುತ್ತಾನೆ ಶಂಭು.

ಇದರಿಂದ ಕುಪಿತನಾಗುವ ಜಮೀನ್ದಾರ ಹಾಗಾದರೆ ನಾಳೆಯೇ ಸಾಲ ಮರುಪಾವತಿಸು. ಇಲ್ಲವಾದರೆ ಜಮೀನು ಹರಾಜು ಹಾಕುವುದಾಗಿ ಬೆದರಿಸುತ್ತಾನೆ.

ಮನೆಗೆ ಬಂದ ಶಂಭು ತಂದೆಯೊಡನೆ ಚರ್ಚಿಸುತ್ತಾನೆ. ಪಡೆದ ಸಾಲ ಎಷ್ಟಿರಬಹುದು ಎಂಬುದನ್ನು ಮಗ ಕನ್ಹಯ್ಯಾನ ಸಹಾಯದಿಂದ ಲೆಕ್ಕ ಮಾಡುತ್ತಾನೆ. ಎಲ್ಲ ಸೇರಿ ೬೫ ರೂ. ಸಾಲ ಪಡೆದಿರುವ ಮಾಹಿತಿ ಸಿಗುತ್ತದೆ. ಪತ್ನಿಯ ಒಡವೆ, ಸಣ್ಣ ಪುಟ್ಟ ಸಾಮಾನು ಮಾರಿ ಹಣ ಕೊಡಲು ಜಮೀನ್ದಾರನ ಮನೆಗೆ ಬರುತ್ತಾನೆ. ಅಲ್ಲಿ ಜಮೀನ್ದಾರನ ಕಾರಕೂನ ಬೇರೆಯೇ ಲೆಕ್ಕ ಹೇಳುತ್ತಾನೆ. ಮರಳಿಸಬೇಕಾದ ಹಣ ೬೫ ಅಲ್ಲ, ೨೩೫ ಎಂಬುದನ್ನು ಕೇಳಿ ಶಂಭು ದಂಗಾಗುತ್ತಾನೆ. ಈ ಪ್ರಕರಣ ಕೋರ್ಟ್ ಮೆಟ್ಟಿಲೇರುತ್ತದೆ. ಅನಕ್ಷರಸ್ಥ ಶಂಭು ಕೋರ್ಟಿನಲ್ಲಿ ಅದ್ಹೇಗೆ ಕಾರಕೂನ ಮೋಸದ ಲೆಕ್ಕ ಹಚ್ಚಿದ್ದಾನೆ ಎಂಬುದನ್ನು ವಿವರಿಸುವಲ್ಲಿ ವಿಫಲವಾಗುತ್ತಾನೆ. ಕೇಸ್ ಸೋಲುತ್ತಾನೆ. ಕೋರ್ಟ್ ಅವನಿಗೆ ಮೂರು ತಿಂಗಳ ಕಾಲಾವಕಾಶ ಕೊಟ್ಟು ಅಷ್ಟರಲ್ಲಿ ಸಾಲ ಮರಳಿಸಬೇಕು, ಇಲ್ಲವಾದರೆ ಜಮೀನು ಹರನಾಮ್ ಸಿಂಗ್‌ಗೆ ಸೇರುತ್ತದೆ ಎಂಧು ತೀರ್ಪು ಕೊಡುತ್ತದೆ.

ಹೇಗಾದರೂ ಮಾಡಿ ಸಾಲ ತೀರಿಬೇಕು ಎಂಬ ಹಟ ಶಂಭುವಿನದು. ಅದಕ್ಕಾಗಿ ಕೋಲ್ಕತ್ತಾಕ್ಕೆ ಹೋಗಿ ದುಡಿದರೆ ಹಣ ಕೂಡಿಟ್ಟು ಸಾಲ ತೀರಿಸಬಹುದು ಎಂದು ಕೆಲ ಸ್ನೇಹಿತರು ಶಂಭುನಿಗೆ ಸಲಹೆ ಕೊಡುತ್ತಾರೆ. ಶಂಭು ಒಪ್ಪುತ್ತಾನೆ. ಆದರೆ ಪತ್ನಿ ಪಾರೋಗೆ ಇದು ಇಷ್ಟವಾಗುವುದಿಲ್ಲ. ತಾನೀಗ ಗರ್ಭಿಣಿಯಾದ್ದರಿಂದ ಪತಿಯನ್ನು ಬಿಟ್ಟಿರಲು ಒಪ್ಪುವುದಿಲ್ಲ. ಅದಕ್ಕೆ ಶಂಭು ಮಕ್ಕಳ ಭವಿಷ್ಯಕ್ಕಾಗಿಯೇ ಜಮೀನು ಬಿಡಿಸಲು ದುಡಿಯಲು ಹೋಗುತ್ತಿದ್ದೇನೆ. ಮೂರೇ ತಿಂಗಳ ಮಾತಲ್ಲವೆ? ಬಂದು ಬಿಡುತ್ತೇನೆ ಎಂದು ಹೇಳಿ ಹೆಂಡತಿಯನ್ನು ಒಪ್ಪಿಸುತ್ತಾನೆ. ಕೋಲ್ಕತ್ತಾಕ್ಕೆ ಹೊರಟುನಿಂತ ಶಂಭುವನೊಡನೆ ಕನ್ಹಯ್ಯಾ ತಾನೂ ಬರುತ್ತೇನೆಂದು ದುಂಬಾಲು ಬೀಳುತ್ತಾನೆ. ಹಟ ಸಾಧಿಸುತ್ತಾನೆ.

ಕೋಲ್ಕತ್ತಾದಲ್ಲಿ ಶಂಭು, ಕನ್ಹಯ್ಯಾ ಪಡಬಾರದ ಕಷ್ಟ ಪಡುತ್ತಾರೆ. ರಸ್ತೆ ಪಕ್ಕ ಮಲಗಿದ್ದಾಗ ಅವರಲ್ಲಿದ್ದ ವಸ್ತುಗಳು ಕಳುವಾಗುತ್ತವೆ. ನಗರದ ಜನ ಇವರನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಕನ್ಹಯ್ಯಾ ಹೇಗೋ ಒಬ್ಬ ಬೂಟ್ ಪಾಲಿಶ್ ಮಾಡುವವನಾದ ಲಾಲು ಉಸ್ತಾದನ ಸ್ನೇಹ ಗಳಿಸುತ್ತಾನೆ. ಅವನಿಂದಾಗಿ ಒಂದು ಚಿಕ್ಕ ಕೋಣೆ ಬಾಡಿಗೆಗೆ ಪಡೆದು ಕೆಲಸ ಹುಡುಕುತ್ತಾನೆ ಶಂಭು. ಅನಕ್ಷರಸ್ಥನಿಗೆ ಯಾವ ಕೆಲಸ ಸಿಗಬೇಕು? ಕೂಲಿ ಕೆಲಸ ಮಾಡುತ್ತಾನೆ. ಕೊನೆಗೆ ಒಮ್ಮೆ ವೃದ್ಧ, ರಿಕ್ಷಾ ಎಳೆಯುವವನಿಗೆ ಸಹಾಯ ಮಾಡುವ ಶಂಭು ತನಗೂ ಒಂದು ರಿಕ್ಷಾ ಬಾಡಿಗೆಗೆ ಕೊಡಿಸಲು ಕೇಳಿಕೊಂಡು ಅದೇ ಕೆಲಸ ಆರಂಭಿಸುತ್ತಾನೆ. ಬಾಲಕ ಕನ್ಹಯ್ಯಾ ಬೂಟ್ ಪಾಲಿಶ್ ಮಾಡಿ ಪುಡಿಗಾಸು ಸಂಪಾದಿಸುತ್ತಾನೆ.

ಇತ್ತ ಗ್ರಾಮದಲ್ಲಿ ನದಿ ತೀರದಲ್ಲಿ ಬೆಳೆದ ಗೆಡ್ಡೆ ಗೆಣಸು ತಿಂದು ದಿನ ಪಾರೋ ದೂಡುತ್ತಾಳೆ. ಆಕೆ ಶ್ರೀಮಂತರ ಸೊಸೆ (ಮೀನಾಕುಮಾರಿ)ಯ ಸಹಾಯದಿಂಧ ಪತಿಗೆ ಪತ್ರ ಬರೆಯಿಸಿ ಅಲ್ಲಿಯ ಸಮಾಚಾರ ತಿಳಿದುಕೊಳ್ಳುತ್ತಿರುತ್ತಾಳೆ. ಕೆಲದಿನಗಳ ನಂತರ ಪತಿಯ ಯಾವ ಸುದ್ದಿಯೂ ಬರದಾದಾಗ ಪಾರ್ವತಿ ಗಾಬರಿಗೊಳ್ಳುತ್ತಿರುತ್ತಾಳೆ. ಶಂಭು ಹಳ್ಳಿ ಹಾಗೂ ನಿನ್ನನ್ನು ಮರೆತಿದ್ದಾನೆಂದು ಜಮೀನ್ದಾರನ ಕಡೆಯವರು ಕುಹಕವಾಡಿ ಸತಾಯಿಸುತ್ತಾರೆ ಆಗ ಗರ್ಭಿಣಿ ಪಾರ್ವತಿ ಕೋಲ್ಕತ್ತಾಕ್ಕೆ ಹೊರಟು ನಿಲ್ಲುತ್ತಾಳೆ.

ಕೋಲ್ಕತ್ತಾದಲ್ಲಿ ಅಪರಿಚಿತನೊಬ್ಬ ಆಕೆಗೆ ಮೋಸ ಮಾಡುತ್ತಾನೆ. ಅವನಿಂದ ಬಚಾವಾಗಲು ಓಡಿ ಬರುವಾಗ ಅಪಘಾತವಾಗುತ್ತದೆ. ಅದೇ ಸಮಯಕ್ಕೆ ಅಲ್ಲಿ ನೆರೆದವರು ಸಹಾಯಕ್ಕಾಗಿ ಕರೆದ ರಿಕ್ಷಾ ಶಂಭುವಿನದೇ ಆಗಿರುತ್ತದೆ! ಪತ್ನಿ ಗಾಯಗೊಂಡಿರುವುದನ್ನು ನೋಡಿ ಕಂಗಾಲಾಗುವ ಶಂಭು ಆಕೆಯನ್ನು ಅಸ್ಪತ್ರೆಯಲ್ಲಿ ದಾಖಲಿಸಿ, ಔಪಧೋಪಚಾರಕ್ಕಾಗಿ ಕೂಡಿಟ್ಟಿದ್ದೆಲ್ಲವನ್ನು ಕಳೆದುಕೊಳ್ಳುತ್ತಾನೆ.

ಎಲ್ಲ ಕಳೆದುಕೊಂಡು ಇತ್ತ ಗ್ರಾಮಕ್ಕೆ ಬಂದು ನೋಡಿದರೆ ಆತನ ಜಮೀನಿನಲ್ಲಿ ದೊಡ್ಡ ಕಾರ್ಖಾನೆ ಎದ್ದಿರುತ್ತದೆ. ಜಮೀನ್ದಾರನನ್ನು ಕಂಡು ಮಾತನಾಡೋಣವೆಂದರೆ ವಾಚ್‌ಮನ್ ಒಳ ಹೋಗಲು ಸಹ ಬಿಡುವುದಿಲ್ಲ. ಕೊನೆಗೆ ಆ ಭೂಮಿಯ ಮಣ್ಣನ್ನು ಹಣೆಗೆ ಹಚ್ಚಿಕೊಂಡು ಶಂಭು ಅಲ್ಲಿಂದ ನಿರ್ಗಮಿಸುತ್ತಾನೆ.

ಒಂದು ದಿನ ವ್ಯಕ್ತಿಯೋರ್ವ ಶಂಭುವನ್ನು ಕರೆದು ತನ್ನ ಪ್ರೇಯಸಿ ಹತ್ತಿ ಕುಳಿತ ಕುದುರೆಗಾಡಿಗೆ ಸರಿ ಸಮನಾಗಿ ರಿಕ್ಷಾ ಎಳೆಯಲು ಕೇಳುತ್ತಾನೆ. ಹಾಗೆ ಮಾಡಿದರೆ ಹೆಚ್ಚಿನ ಹಣ ಕೊಡುವುದಾಗಿ ಹೇಳುತ್ತಾನೆ. ದುಡ್ಡಿನ ಅತಿ ಅವಶ್ಯಕತೆಯಿದ್ದ ಶಂಭು ಅದಕ್ಕೆ ಒಪ್ಪುತ್ತಾನೆ. ಅದೆಷ್ಟು ಜೋರಾಗಿ ಓಡುತ್ತಾನೆಂದರೆ ರಿಕ್ಷಾದ ಗಾಲಿಯೊಂದು ಕಳಚಿ ಬೀಳುತ್ತದೆ. ಶಂಭು ಗಂಭೀರವಾಗಿ ಗಾಯಗೊಳ್ಳುತ್ತಾನೆ.

ತಂದೆಯ ಸ್ಥಿತಿ ನೋಡಿ ಮಗ ಕನ್ಹಯ್ಯಾ ಬೇಗ ಹಣ ಗಳಿಸಲು ಕಳವು ಮಾಡುವುದನ್ನು ಕಲಿಯುತ್ತಾನೆ. ವಿಷಯ ಗೊತ್ತಾಗಿ ಶಂಭು ಮಗನಿಗೆ ಹೊಡೆಯುತ್ತಾನೆ.

ಪತಿ ಶಂಭುವಿನ ಸುದ್ದಿ ಊರಿಗೆ ತಲುಪುತ್ತದೆ. ಪಾರೋ ಬಿಟ್ಟದ್ದುಬಿಟ್ಟು ಓಡಿ ಬರುತ್ತಾಳೆ. ಆಕೆಯೂ ಅಪಘಾತಕ್ಕೀಡಾಗುತ್ತಾಳೆ. ಆಸ್ಪತ್ರೆಯಲ್ಲಿ ತಾಯಿಯ ದಯನೀಯ ಸ್ಥಿತಿ ನೋಡಿ ಕನ್ಹಯ್ಯಾ ದೇವರೇ ತನಗೆ ಕೊಟ್ಟ ಶಿಕ್ಷೆ ಇದೆಂದು ಭಾವಿಸಿ ತನ್ನನ್ನು ತಾನು ಹಳಿದುಕೊಳ್ಳುತ್ತಾನೆ. ತಂದ ರೂಪಾಯಿಯನ್ನು ಹರಿದು ಚೂರುಚೂರು ಮಾಡುತ್ತಾನೆ.

ಹೀಗೆ ಸಿನಿಮಾ ಭೂಮಿಯ ಮಹತ್ವ, ಶಿಕ್ಷಣದ ಮಹತ್ವ, ನಗರವಾಸಿಗರ ಅಂದಿನ ಮನೋಭಾವ, ಮಹಿಳೆಗಿರುವ ಸಾಮಾಜಿಕ ತೊಡಕುಗಳು ಎಲ್ಲವನ್ನೂ ಮಾರ್ಮಿಕವಾಗಿ ಚಿತ್ರಿಸಿದೆ.

(ಸಾಭಾರ: ಕಸ್ತೂರಿ)

ಮಣ್ಣಿನಲ್ಲೇನಿದೆ ಮಣ್ಣು?

–ಕೃಷ್ಣ ಸುಬ್ಬರಾವ್

'ಮಣ್ಣಿನಲ್ಲೇನಿದೆ' ಎಂಬ ಪ್ರಶೆಗೆ 'ಮಣ್ಣಿನಲ್ಲೇನಿಲ್ಲ' ಎಂದು ಕೇಳಬೇಕಾಗುತ್ತದೆ. ಮಣ್ಣಿಗೆ ಮನುಷ್ಯ ಅತ್ಯಂತ ಉನ್ನತ ಸ್ಥಾನ ಹಾಗೂ ಅಷ್ಟೆ ಕನಿಷ್ಠ ಸ್ಥಾನವನ್ನು ಕೊಟ್ಟಿರುವುದು ವಿಪರ್ಯಾಸ. ಹೆಣ್ಣು ಮತ್ತು ಹೊನ್ನು ಎಂದಾದ ಮೇಲೆ ಮಣ್ಣು ಬರುತ್ತದೆ. ಆದರೆ ಅದು ಕಡೆಯ ಸ್ಥಾನವಲ್ಲ. ಸಮಾನಾಂತರವಾಗಿ ಮಣ್ಣಿಗೂ ಮಣೆಹಾಕುತ್ತೇನೆ. ಹೆಣ್ಣು ಹಾಗೂ ಹೊನ್ನು ಎಲ್ಲರಿಗೂ ಸಿಗದಿರಬಹುದು ಆದರೆ ಮಣ್ಣು ಪ್ರತಿಯೊಬ್ಬನ ಪಾಲಿಗೂ ಇದೆ.

ತಲೆಗೆ ಹುಳಬಿಟ್ಟುಕೊಳ್ಳುವುದು ಅನೇಕರ ಹವ್ಯಾಸ. ನಾನು ಮಣ್ಣಿನಹುಳ ಅರ್ಥಾತ್ ಎರೆಹುಳ ಬಿಟ್ಟಕೊಂಡಿದ್ದೇನೆ. ಮಣ್ಣಿನ ಸಂಶೋಧನೆ ಮಾಡಬೇಕೆಂಬ ಹಠಕ್ಕೆ ಬಿದ್ದಿದ್ದೇನೆ. 'ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತಿತೇನನು' ಎಂಬ ಅಡಿಗರ ಸಾಲನ್ನು ನೆನಪಿಸಿಕೊಂಡರೆ ಅಹಂಕಾರದ ಮಾತಾದೀತು, ಪರವಾಗಿಲ್ಲ. ಸಂದರ್ಭಕ್ಕೆ ಸರಿಯಾದುದರಿಂದ ಉಪಯೋಗಿಸುವುದರಲ್ಲಿ ತಪ್ಪೇನಿಲ್ಲ.

ಚಿಕ್ಕಂದಿನಿಂದಲೇ ಎಲ್ಲ ಹುಡುಗರಂತೆ ನಾನೂ ಮಣ್ಣಿನಿಂದ ಆಕರ್ಷಿತನಾದವನು. ವಯಸ್ಸಾದ ಮೇಲೂ ಅದರ ಮೇಲಿನ ಆಸಕ್ತಿ ಕಿಂಚಿತ್ತೂ ಕಡಿಮೆಯಾಗಿಲ್ಲ, ಇನ್ನೂ ಜಾಸ್ತಿಯಾಗಿದೆ. ತಲೆ ಮೇಲೆ ಮಣ್ಣು ಎರಚಿಕೊಳ್ಳುವುದು. ಇತರರಿಗೂ ಎರಚುವುದು ಪ್ರತಿಯೊಬ್ಬ ಹುಡುಗನು ಮಾಡಿಯೆ ದೊಡ್ಡವನಾಗುವುದು. ಬಾಲ'ಕೃಷ್ಣ'ನೊಬ್ಬನು ತನ್ನ ಬಾಯಿ ತೆರೆದು ಬ್ರಹ್ಮಾಂಡವನ್ನು ತಾಯಿಗೆ ಸಾಂಕೇತಿಕವಾಗಿ ತೋರಿಸಿರಬಹುದಷ್ಟೆ ಮಿಕ್ಕ ಮಕ್ಕಳಿಗೆ ಮಣ್ಣೇ ಬ್ರಹ್ಮಾಂಡ. ಮಣ್ಣಿನ ತಾಣವೇ ಅವರಿಗೆ ಕ್ರಿಡಾಂಗಣ. ಕಬಡ್ಡಿ, ಚಿನ್ನಿಕೋಲು, ಕೊ... ಕೊ... ಗೋಲಿ, ಬುಗುರಿ ವಗ್ಯೆರೆ ಆಟಗಳಿಗೆ ಜನ್ಮಭೂಮಿ ಮಣ್ಣೇ. ಬೀದಿಬದಿ ಮಣ್ಣಿನಲ್ಲೇ ನಮ್ಮೆಲ್ಲ ಆಟಗಳು. ನಾಗರಿಕತೆಯ ಬೆಳವಣಿಗೆಯಿಂದಾಗಿ ನಮಗೆ ಮಣ್ಣು ಬೇಕಾದರೆ ಈಗ ಮೈದಾನಕ್ಕೆ ಹೋಗಬೇಕಾದ ದುಃಸ್ಥಿತಿ. ಹೀಗಾಗಿ ಇಂದಿನ ಮಕ್ಕಳಿಗೆ ಸುಲಭದಲ್ಲಿ ಮನೆಯ ಮುಂದೆ ಮಣ್ಣು ಸಿಗುವುದಿಲ್ಲ. ಪರಿಣಾಮವಾಗಿ ಅನೇಕ ಆಟಗಳು ಇತಿಹಾಸದ ಪುಟಗಳಿಗೆ ಸೇರಿಹೋಗಿವೆ.

ಗಣೇಶನ ಹಬ್ಬ ಬಂದಾಗ ಹೆಚ್ಚಿನ ಜನರು ಪರಿಸರ ಕಾಪಾಡಲು ಮಣ್ಣಿನ ಗಣೇಶನನ್ನೇ ತರುತ್ತಾರೆ. ವಿಸರ್ಜನೆ ಸುಲಭವೆಂಬುದು ಒಂದು ಕಾರಣವಾದರೆ, ಇನ್ನೊಂದು ಮುಖ್ಯ ಕಾರಣ ಗಣೇಶನ ಸೃಷ್ಟಿಯೆ ಮಣ್ಣಿನಿಂದ ಎಂಬುದು ಸ್ನಾನಮಾಡಲು ಪಾರ್ವತಿ ಹೋದಾಗ ಕಾವಲು ಕೂಡಿಸಲು ಗಣೇಶನನ್ನು ಸೃಷ್ಟಿಸಿದ್ದು, ಪ್ರವೇಶವನ್ನು ತಡೆದದ್ದಕ್ಕಾಗಿ ಕೋಪಗೊಂಡ ಶಿವ ಕತ್ತು ಕತ್ತರಿಸಿ ಅನಂತರ ಆನೆತಲೆ ಜೋಡಿಸಿದ

ಕಥೆ ಎಲ್ಲರಿಗೂ ಗೊತ್ತು. 'ಮಣ್ಣಿನಿಂದಲೇ ಕಾಯ.....' ಎನ್ನುವ ಹಾಡು ಗಣೇಶನಿಗೆ ಹೆಚ್ಚು ಅನ್ವಯವಾಗುತ್ತದೆಯಲ್ಲವೆ?

ಹಿಂದೂಸಂಸ್ಕೃತಿಯ ಗುರುತು ಮೊದಲು ದಕ್ಕಿದ್ದು ಹರಪ್ಪ-ಮಹೆಂಜೊದಾರದಲ್ಲಿ. ಅಲ್ಲಿ ಮಣ್ಣಿನ ಮುದ್ರೆಗಳು ದೊರಕಿದವು. ಅವುಗಳಿಂದ ಸಿಂಧೂಲಿಪಿ ಲಭ್ಯವಾಯಿತು. ಮಣ್ಣಿಗೆ ಹುಲ್ಲನ್ನು ಬೆರಸಿ ಬಲಪಡಿಸುವ ಪ್ರಯತ್ನಗಳನ್ನು ವಿಲ್‌ಡ್ಯೂರಾಂಟ್ ತನ್ನ "ಸ್ಟೋರಿ ಆಫ್ ಸಿವಿಲೈಸೇಷನ್"ನಲ್ಲಿ ದಾಖಲಿಸಿದ್ದಾನೆ. ಮಣ್ಣಿನಿಂದಲೇ ಮನೆಕಟ್ಟಿದರೆ ಹೆಚ್ಚು ಬಾಳಿಕೆ ಬರುತ್ತದೆ. ಎಂದು ಈಗಲೂ ಅನೇಕರು ದೃಢವಾಗಿ ನಂಬಿದ್ದಾರೆ. ಇಂಟರ್‌ಲಾಕ್ ಮಡ್‌ಬ್ಲಾಕ್ ಹೊಸ ಪರಿಕಲ್ಪನೆ. ಅಂತಹ ಕಟ್ಟಡಗಳಲ್ಲಿ ಸೆಕೆ (ಉಷ್ಣ) ಕಮ್ಮಿ ಇರುತ್ತದೆಯಂತೆ. ಅಂತಹ ಮನೆಗಳನ್ನು ಕಟ್ಟುವಾಗ ಕಾಲಂಗಳ, ಬೀಮುಗಳ ಅವಶ್ಯಕತೆ ಇರುವುದಿಲ್ಲ ಎಂಬುದು ಮತ್ತೊಂದು ಅನುಕೂಲ.

ಹುಟ್ಟುವಾಗ ಅಣ್ಣ-ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳಾಗುವುದು ಮಣ್ಣಿನ ಅರ್ಥಾತ್ ಭೂಮಿಯ ಕಾರಣಕ್ಕಾಗಿ. ಒಂದು ಸೂಜಿಮೊನೆಯಷ್ಟು ಜಾಗವನ್ನು ಕೊಡುವದಿಲ್ಲ. ಎಂದು ದುರ್ಯೋಧನ ಹಠಹಿಡಿದಾಗ ಮಹಾಭಾರತಯುದ್ಧ ಸಂಭವಿಸಿತು. ಅದರಲ್ಲೂ ಪಾಂಡವರಿಗೆ ಕುರುಕ್ಷೇತ್ರದಲ್ಲಿ ಜಯ ಲಭಿಸಿಲೂ ಮಣ್ಣೇ? ಪಾರ್ಥಸಾರಥಿ ಅರ್ಜುನನಿಗೆ ಬಾಣಬಿಡಲು ಆದೇಶ ನೀಡುತ್ತಾನೆ. ಒಂದು ರೀತಿಯಲ್ಲಿ ರಾಮಾಯಣವಾಗುವುದಕ್ಕೂ ಮಣ್ಣೇ ಕಾರಣವಲ್ಲವೆ? ಜನಕ ಮಹಾರಾಜನಿಗೆ ಮಣ್ಣಿನಲ್ಲಿ ಸಿಕ್ಕ ಕುವರಿ ಸೀತೆಯಲ್ಲವೆ? ಅವಳಿಂದಲೇ ಅಥವಾ ಅವಳಿಗಾಗಿಯೇ ತಾನೆ ರಾಮಾಯಣ ನಡೆದದ್ದು. ಕಡೆಗೇನಾಯಿತು ಎಲ್ಲವನ್ನೂ ಗೆದ್ದುಬಂದರೂ ಸೀತೆ ತನ್ನ ತಾಯಿ ಮಡಿಲಲ್ಲೆ, ಭೂಮಿಯೊಳಗೆ ಹೋಗಬೇಕಾಯಿತಲ್ಲವೆ?

ಮನುಷ್ಯರಂತೆ ಪ್ರಣಿಗಳಿಗೂ ಮಣ್ಣೇ ಆಸರೆ. ನೆವೆಯಾದಾಗ ಪ್ರಾಣಿಗಳು ಮಣ್ಣಿನಲ್ಲಿ ಮನಬಂದಂತೆ ಹೊರಳಾಡಿ ಸುಖಿಸುತ್ತವೆ. ವಿಶ್ರಾಂತಿಗಾಗಿ ಮಣ್ಣನ್ನೇ ಅವಲಂಬಿಸುತ್ತವೆ. ನಾಯಿಗಳಂತೂ ನಿಂತಲ್ಲೇ ಮೂರು ನಾಲ್ಕು ಸುತ್ತು ಗಿರಕಿಹೊಡೆದು ಒಂದು ಹಳ್ಳವನ್ನು ನಿರ್ಮಿಸಿ ಶಾಂತಿಯಿಂದ ಅದರಲ್ಲಿ ಮಲಗಿಬಿಡುತ್ತವೆ. ಕಾಲಿನಿಂದ ತನ್ನನ್ನು ತುಳಿದವರನ್ನು ರಕ್ಷಿಸುವ, ಪೋಷಿಸುವ ಗುಣ ಮಣ್ಣಿನದು. ಆಯತಪ್ಪಿ ಬಿದ್ದಾಗ ಅಥವಾ ಯಾರಾದರೂ ಪ್ರಯತ್ನಪೂರ್ವಕವಾಗಿ ನಮ್ಮನ್ನು ಕೆಡವಿದಾಗ ಆತ್ಮಿಯತೆಯಿಂದ ತಬ್ಬಿಕೊಳ್ಳುವುದು ಮಣ್ಣು. 'ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ ಕುದುರೆ ನೀನ್ ಅವನು ಹೇಳ್ದಂತೆ ಪಯಣಿಗರು ಮದುವೆಯೋ ಮಸಣಕೋ ಹೋಗೆಂದ ಕಡೆಗೋಡು ಪದಕುಸಿಯೇ ನೆಲವಿಹುದು- ಮಂಕುತಿಮ್ಮ' ಎಂದು ನಾವು ಓದಿದ್ದೇವೆ. ಅಂದರೆ ಏನಾದರೂ ಆಗಲಿ ಕಡೆಗೆ ರಕ್ಷಣೆಗೆ ನೆಲವೊಂದಿದೆ, ಮಣ್ಣಿದೆ, ಭಯಪಡಬೇಡ ಎನ್ನುತ್ತಾರೆ ಡಿ.ವಿ.ಜಿ.

ಕೆಳಗೆ ಬಿದ್ದವರನ್ನು ಕಾಪಾಡುವುದು ಮಣ್ಣಿನ ಸಹಜಗುಣ. ಬಹುಶಃ ಅದಕ್ಕೇ ಜಟ್ಟಿಗಳು ಕುಸ್ತಿ ಆಡುವುದು ಮಣ್ಣಿನ ಅಖಾಡದಲ್ಲಿ. ಬಿದ್ದರೂ ಪೆಟ್ಟಾಗದಿರಲಿ ಎಂದು. ಜಟ್ಟಿಗೂ ಮಿಟ್ಟಿಗೂ ಅವಿನಾಭಾವ ಸಂಬಂಧವಿದೆ. 'ಜಟ್ಟಿ ಜಾರಿಬಿದ್ದರು ಮೀಸೆ ಮಣ್ಣಾಗೊಲ್ಲ' ಎಂಬ ಜನಪ್ರಿಯ ನುಡಿಯ ಹಿಂದೆ ಇರುವ ಸತ್ಯವೆಂದರೆ ಮನುಷ್ಯನ ಅತ್ಯಂತ ಪ್ರತಿಷ್ಠೆಯ ಸ್ಥಾನ ಮೀಸೆ ಎಂಬ ಅಂಶ. ಏನಾದರಾಗಲಿ ಮೀಸೆಗೆ ಮಣ್ಣು ಮೆತ್ತಿಕೊಳ್ಳಬಾರದೆಂಬ ಹಠ ಕಾಣಿಸುತ್ತದೆ.

"ಹೊನ್ನೆಲ್ಲ ಮಣ್ಣು...." ಎಂದು ಹೇಳುವುದಕ್ಕೆ ವೇದಾಂತಿಗಳೇ ಆಗಬೇಕಾದರೂ, ರೈತರು "ಮಣ್ಣೆಲ್ಲ ಹೊನ್ನು" ಎನ್ನಬಹುದು. ಹಿಂದಿನ ಕಾಲದಲ್ಲಿ ಹೊನ್ನನ್ನೇ ಪ್ರಕೃತಿಯಂತೆ ಮಣ್ಣಿನಲ್ಲೆ ಹೂತಿಡುತ್ತಿದ್ದರು. ರತ್ನ ಸಿಗಬೇಕಾದರೆ ಪ್ರಯತ್ನ ಬೇಕೆನ್ನುವ ಬೇಂದ್ರೆಯವರ ಮಾತನ್ನು, ಗೋಪಾಲಕೃಷ್ಣ ಅಡಿಗರ "ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು| ಕೆಳಕ್ಕೆ ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ ಕಂಡೀತು ಗೆರೆಯಿರಿವ ಚಿನ್ನದದಿರು" ಎಂಬ ಸಾಲುಗಳು ಸ್ಪಷ್ಟೀಕರಿಸುತ್ತದೆ. ಕುಡಿಕೇಲಿ ಕೂಡಿಟ್ಟ ಹಣ ಎಷ್ಟು ದಿನ ಬರುತ್ತದೆ ಎನ್ನಬಹುದು. ಆದರೆ ಕುಕೆಯಲ್ಲಿ ಶುರುವಾದ ಕೂಡಿಕೆ (ಉಳಿತಾಯ) ಮುಂದೆ ಹೂಡಿಕೆಯಾಗಿ ನಮಗೆ ನಿರಂತರ ಆದಾಯ ಬರಲು ಕಾರಣವಾಗಬಹುದು.

ತಣ್ಣನೆಯ ನೀರಿಗೆ ಮಡಕೆ, ಮೊಸರಿಗೆ ಗಡಿಗೆ, ಉಪ್ಪಿನಕಾಯಿಗೆ ಜಾಡಿ, ಕಡೆಗೆ ಕೆಲವು ಕಡೆ ಕಾಫಿ ಟೀಗೂ ಮಡಕೆ ಬಳಸುವವರು ನಾವು. ಬಳಸಿ ಬಿಸಾಡುವ (ಯೂಸ್ ಅಂಡ್ ತ್ರೋ) ಪದ್ಧತಿಯನ್ನು ಮೊದಲು ಜಾರಿಗೆ ತಂದವರು ನಾವಲ್ಲವೆ? ಒಂದು ಕಡೆ ಆರೋಗ್ಯದೃಷ್ಟಿಯಿಂದ ಒಳ್ಳೆಯದಾದರೆ, ಇನ್ನೊಂದು ಕಡೆ ಗುಡಿ ಕೈಗಾರಿಕೆಯಾದ ಮಡಕೆ-ಕುಡಿಕೆಗಳನ್ನು ಸದಾಕಾಲವೂ ಮಾಡುವ ಈ ಕೈ-ಗಾರಿಕೆಗೆ ಹೆಚ್ಚು ಒತ್ತುಕೊಡಬೇಕಲ್ಲವೆ?

ಹಬ್ಬ-ಹರಿದಿನಗಳಲ್ಲಿ ನಮಗೆ ಮಣ್ಣು ಬೇಕೇಬೇಕು. ಮಣ್ಣಿನ ಹಣತೆಯಿಲ್ಲದೆ ದೀಪಾವಳಿ ಇಲ್ಲ. ಭೀಮನಅಮಾವಾಸ್ಯೆ ದಿನ ಮಣ್ಣಿನಿಂದ ಶಿವ-ಪಾರ್ವತಿ ಆಕೃತಿಯನ್ನು ಕೊನಾಕಾರದಲ್ಲಿ ಮಾಡಿ ಸುಣ್ಣದಿಂದ ಚುಕ್ಕೆ ಇಟ್ಟು ಹೆಣ್ಣುಮಕ್ಕಳಿಂದ ಗಂಡನ ಪೂಜೆ ಮಾಡಿಸುವ ಸಂಪ್ರದಾಯ ಕೆಲವರಿಲ್ಲದೆ. ಮಣ್ಣೆತ್ತಿನ ಅಮಾವಾಸ್ಯೆಯೆಂದು ಆಚರಿಸುವ ಪದ್ಧತಯಿದೆ. ಮಣ್ಣಿನಿಂದ ಎತ್ತುಗಳನ್ನು ರೂಪಿಸುತ್ತೇವೆ. ವೃಂದಾವನದಿಂದ ಮಣ್ಣನ್ನು ತಂದು ಮೃತ್ತಿಕೆ ಎಂದು ಕಣ್ಣಿಗೆ ಒತ್ತಿಕೊಂಡು ಪ್ರತಿನಿತ್ಯ ಅನೇಕರು ಸೇವಿಸುತ್ತಾರೆ.

ಬಸುರಿಯಾದಾಗ ಮಣ್ಣುತಿನ್ನುವ ಬಯಕೆ ಅನೇಕ ಮಹಿಳೆಯರಿಗೆ ಆಗುತ್ತದೆ. ಅದನ್ನು ಲಘುಧಾಟಿಯಲ್ಲಿ "ನೋಡಿ ಆಕೆ ಮಣ್ಣುತಿನ್ನುವ ಕೆಲಸ ಮಾಡಿಕೊಂಡಿದ್ದಾಳೆ" ಎಂದು ಹೇಳುವುದನ್ನು ಕೇಳಿದ್ದೇವೆ. ಏನೇ ಆಗಲಿ ನಾವು ಭೂಮಿಗೆ ಧಮುಕುವ ಮೊದಲೆ ಮಣ್ಣುಮುಕ್ಕುವ ಕೆಲಸ ಮಾಡಿರುತ್ತೇವೆ ಎಂದಾಯಿತಲ್ಲವೆ? ನಮ್ಮಮ್ಮನೇ

ನಮಗೆ ಮೊದಲು ಮಣ್ಣುಮುಕ್ಕಿಸುವ ಕೆಲಸ ಮಾಡಿರುತ್ತಾಳೆ! ನಂತರದ ದಿನಗಳಲ್ಲಿ ಬೇರೆಯವರು ಮಣ್ಣುಮುಕ್ಕಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಸತ್ತ ಮೇಲಂತೂ ಮಣ್ಣೇ ಗತಿ. ಎಲ್ಲರಿಂದಲೂ ಒಂದು ಹಿಡಿ ಮಣ್ಣು, ಬದುಕಿದ್ದಾಗಲೂ ಕೆಟ್ಟವರೆನಿಸಿಕೊಂಡವರಿಗೆ ಒಂದು ಹಿಡಿ ಮಣ್ಣು ಹಾಕಿ ಶಾಪ ನೀಡುವುದನ್ನು ಕಾಣುತ್ತೇವೆ.

ಹುಟ್ಟು–ಸಾವುಗಳಿಗೂ ಮಣ್ಣಿನ ನಂಟಿದೆ. "ಬಂದ ಬಾಗಿಲು ಮಣ್ಣು; ಹೋಗುವ ಬಾಗಿಲು ಮಣ್ಣು; ನಡುವೆ ಕಾಪಾಡುವುದು ತಾಯಿ ಕಣ್ಣು: ಎಂದು ನರಸಿಹಸ್ವಾಮಿಯವರು ಬರೆಯುತ್ತಾರೆ. ಬೇಂದ್ರೆಯವರು ತಮ್ಮ ಚೊಚ್ಚಲು ಮಗನನ್ನು ಕಳೆದುಕೊಂಡಾಗ "ಮೊದಲ ಫಲವೊಂದು ಮೀಸಲು ಮಣ್ಣಿಗೆ" ಎಂದು ಹೃದಯಸ್ಪರ್ಶಿ ಸಾಲುಗಳಲ್ಲಿ ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

ಫಲವತ್ತಾಗಿ ರೈತರಿಗೆ ಬೆಳೆ ಬರಲು ಸರಿಯಾಗಿ ಮಣ್ಣಿನ ಪರೀಕ್ಷೆ ಮಾಡಿಸಲೇಬೇಕು. ಮಣ್ಣು ಪರೀಕ್ಷಕನಿಗೆ ಪೆಡೊಲಾಜಿಸ್ಟ್ ಎಂದು ಕರೆಯುತ್ತಾರೆ. ಸಾಹಿತ್ಯರಚಿಸುವುದಕ್ಕೂ ಕೃಷಿಯೆಂದು ಕರೆಯುವುದುಂಟು. ಹಾಗಾದರೆ ಅಟದರ ತಯಾರಿಕೆಗೆ ಬೇಕಾದ ಸಾಮಗ್ರಿಗಳ ಸತ್ತ್ವಪರೀಕ್ಷೆಯಾಗಬೇಡವೆ? ಹಾಗೆ ಮಾಡದೆ ರಚನೆಗಳಾಗುತ್ತಿದ್ದರೆ ಅವು ಮಣ್ಣುಪಾಲಾದರೆ ಸ್ವಲ್ಪವೂ ಅಚ್ಚರಿಯಿಲ್ಲ. ಓದುಗರ ಕಣ್ಣಿಗೆ ಮರ್ಣಣೆರಚುವುದು ಸಾಧ್ಯವಿಲ್ಲ. ನಿಮ್ಮ ಬರವಣಿಗೆಯಲ್ಲಿ ಮಣ್ಣಿನವಾಸನೆಯೇ ಇಲ್ಲವೆಂದು ವಿಮರ್ಶಕರು ಆಕ್ಷೇಪಣೆ ಎತ್ತುತ್ತಾರೆ. ' ಲೇಖನದಲ್ಲೇನಿದೆ ಮಣ್ಣು' ಎಂಬ ಪ್ರಶ್ನೆಯನ್ನು ಅವರೇ ಕೇಳುತ್ತಾರೆ. ಮಣ್ಣು ಇರಬೇಕು ಎನ್ನುವವರೂ ಅವರೇ, ಇರಬಾರದು ಎಂದು ಹೇಳುವವರೂ ಅವರೆ!

ಸಂಕಷ್ಟದಲ್ಲಿದ್ದಾಗ ನಮ್ಮನ್ನು ಕಾಪಾಡುವುದು, ಹೆಣ್ಣು–ಹೊನ್ನು ಹಾಗೂ ಮಣ್ಣು. ಮೂರರ ವ್ಯಾಮೋಹವನ್ನು ಬಿಟ್ಟವರನ್ನುಉ ಸಂನ್ಯಾಸಿ ಎನ್ನುತ್ತೇವೆ. ರಾಕ್ಷಸರೂಪದಲ್ಲಿ ತಲೆಯೆತ್ತಿರುವ ಗಗನಚುಂಬಿ ಕಟ್ಟಡಗಳನ್ನು ಮಣ್ಣು ಎಷ್ಟು ದಿನ ತಡೆದುಕೊಳ್ಳಬಲ್ಲದು? ನಗರಗಳಲ್ಲಿ ದೊಡ್ಡ ಮಳೆಯಿಂದಾಗಿ ನೀರು ಹರಿಯಲು ಜಾಗವಿಲ್ಲದೆ ಜಲಪ್ರಳಯವಾಗುತ್ತಿರುವುದು ದೊಡ್ಡ ದುರಂತ.

ಎಷ್ಟಾದರೂ ನಾವು ಮಣ್ಣಿಗೆ ಅಂಟಿಕೊಂಡ ಜನ. ಮೇಲೇರಬೇಕು ಎಂಬಾಸೆ ಇದ್ದರೂ, ಮಣ್ಣನ್ನು ಬಿಡುವುದಿಲ್ಲ. ಇದರಿಂದಾಗಿ ರಿಯಲ್ ಎಸ್ಟೇಟ್ ಎಲ್ಲದಕ್ಕಿಂತ ದೊಡ್ಡ ಉದ್ಯಮವಾಗುತ್ತಿದೆ. ಎಲ್ಲ ದುರಂತಗಳಿಗೆ, ಅನಾಹುತಗಳಿಗೆ, ಕೊಲೆ–ಸುಲಿಗೆಗಳಿಗೆ ಹೆದ್ದಾರಿಯಾಗಿದೆ.

ಒಂದಲ್ಲ ಒಂದು ದಿನ ಎಲ್ಲರೂ ಮಣ್ಣಾಗುವುದು ನಿಶ್ಚಿತ. ಇದ್ದಷ್ಟು ದಿನ ಒಳ್ಳೆಯ ಕೆಲಸಕ್ಕೆ ನಾವು ನೆಲೆಯಾಗಿ ನಿಲ್ಲಬೇಕು ಮಣ್ಣಿನಂತೆ. ಕುಸಿಯುವ ಮಣ್ಣಾಗಾದೆ ಏಳಿಗೆಯ ಏಣಿಯಾಗಬೇಕು. ಆಸರೆಯ ನೆಲೆಯಾಗಬೇಕು.

(ಸಾಭಾರ: ಉತ್ಥಾನ)

ನಾಲ್ಕಾರು ನಿಟ್ಟಿನಿಂದ.....

ಉಪಯೋಗಕ್ಕೆ ಬಾರದ ಪದವಿಗಳನ್ನು ನೀಡುವ ಮತ್ತು ದುಬಾರಿಶುಲ್ಕ ವಸೂಲಿ ಮಾಡಿ ಸಾಲದ ಹೊರೆ ಹೊರಿಸುವ ಶಿಕ್ಷಣ ಸಂಸ್ಥೆಗಳ ಬಲೆಗೆ ಬೀಳಬೇಡಿ. **–ರಘುರಾಂ ರಾಜನ್ (ಆರ್.ಬಿ.ಐ ಗವರ್ನರ)**

ಜಾತಿಯನ್ನುವುದು ಈಗಿನ ರಾಜಕಾರಣಿಗಳಿಗೆ ಕೋಲ್ಲುವ ಅಸ್ತ್ರವೂ ಹೌದು, ರಕ್ಷಿಸಿಕೊಳ್ಳುವ ಗೂರಾಣಿಯು ಹೌದು. **–ರವೀಂದ್ರ ಭಟ್**

ಸ್ವಾತಂತ್ರ್ಯ ಬಂದ ನಂತರದ ಮೂರುನಾಲ್ಕು ತಲೆಮಾರಿನ ಭಾರತೀಯರು ಭಾರತವನ್ನು ಭ್ರಷ್ಟಚಾರ ಮಯವನ್ನಾಗಿ ಮಾಡಿರುವುದನ್ನು ಮುಂದಿನ ಪೀಳಿಗೆಗೆ ಗೋತ್ತಾಗಲೆಂಬ ಕಾರಣದಿಂದ ಮುಂಬೈಯಲ್ಲಿರುವ ೩೨ ಅಂತಸ್ತಿನ ಆದರ್ಶ ಸೊಸೈಟಿಯ ಕಟ್ಟಡವನ್ನು ಭ್ರಷ್ಟಾಚಾರದ ಸ್ಮಾರಕವನ್ನಾಗಿ ಮಾಡಬೇಕು.
–ಪ್ರಸನ್ ವೀಲ್‌ಫ್ರೇಡ್, ಇಂದೂರು

ಅಂಬೇಡ್ಕರರನ್ನು ಯಾವ ಉನ್ನತ ಮಾನವೀಯ ಮೌಲ್ಯಗಳಿಗಾಗಿ ಹೋರಾಟ ಮಾಡಿದರೋ ಆ ಹೋರಾಟ ತನ್ನ ಕ್ಷುದ್ರತೆಯಿಂದಾಗಿ ಹಲವು ಬಾರಿ ದಾರಿ ತಪ್ಪಿದ್ದರೂ ಆ ಮೌಲ್ಯಗಳನ್ನು ಪ್ರಸ್ತಾಪಿಸ ಬಯಸುವವರು, ಪುನರ್ ಅನ್ವೇಷಿಸ ಬೇಕಾಗಿರುವುದು ಗಾಂಧೀಯೊಂದಿಗೆ ನಡೆಸಿದ ವಾಗ್ವಾದದ ಪರಿಪ್ರೇಕ್ಷದಲ್ಲೇ, ಆ ವಾಗ್ವಾದ ಏಕೆ ಮತ್ತು ಎಲ್ಲಿ ಹಳಿ ತಪ್ಪಿತು ಎಂಬುದರ ವಸ್ತುನಿಷ್ಟ ಪರಿಶೀಲನೆಯ ಮೂಲಕವೇ **–ಜಿ.ಎಸ್.ನಾಗಭೂಷಣ**

ಯಾರನ್ನು ತನ್ನ ಕಾಲದ ಪ್ರಾಯ: ಎಲ್ಲಕಾಲದ ಮಹೋನ್ನತ್ತ ಹಿಂದೂ ಎಂದು ಲೋಕವು ಕರೆಯಿತೋ ಅಂಥ ಮಹಾತ್ಮ ಗಾಂಧೀ ಸಾಯದಂತೆ ಕೊನೆಗೂ ನೋಡಿಕೊಂಡದ್ದು ತಾನೂ ಹಿಂದೂ ಆಗಿ ಸಾಯಲಾರನೆಂದ ಅಂಬೇಡ್ಕರ. **–ಲಕ್ಷ್ಮೀಶ್ ತೋಳ್ಪಾಡಿ**

ಬೌದ್ಧ ಧರ್ಮ ಮೂಲತಃ ಹೃದಯದಲ್ಲಿ ಅರಳಿ ಬುದ್ಧಿಗೆ ತಾಕಿ ಸಾಮಾಜಿಕ ಆಗಬಯುಸುವ ಧರ್ಮ. ಧರ್ಮದ ಈ ದಾರಿಯನ್ನೇ ಅಂಬೇಡ್ಕರ ತಿರುಗುಮೂರುಗು ಮಾಡಿದ್ದರೆನಿಸುತ್ತದೆ. ಸಾಮೂಹಿಕ ಮಂತಾಂತರ ಎಂಬುದು ಬೌದ್ಧ ಧರ್ಮಕ್ಕೆ ಅಸಾಧು ವಾದದೆಂದು ಅವರಿಗೆ ಹೊಳೆಯಲೆ ಇಲ್ಲ.

ಆಧುನಿಕ ಅರ್ಥದಲ್ಲಿ ಮಂತಾತರ ಎಂಬುದೇ ಬೌದ್ಧ ಧರ್ಮಕ್ಕೆ

ವಿರುದ್ಧವಾದದು. ಏಕೆಂದರೆ ಅದು ಮತವಲ್ಲ! ದಲ್ಲಾಯಲಾಮಾ ಮಾತುಗಳಲ್ಲಿ ಹೇಳುವುದಾದರೆ ಯಾರೂ ಮಂತಾಂತರ ಹೊಂದಿ ಬೌದ್ಧರಾಗಬೇಕಿಲ್ಲ. ನೀವು ಇರುವಡೆಯಲ್ಲಿ ಬೌದ್ಧರಾಗಬಹುದು. ಜೆ.ಕೆ.ಯವರಂತೆ, ಓಸೋ ರವರಂತೆ, ನಮ್ಮವರೆ ಆದ ಕುವೆಂಪು, ತೇಜಸ್ವಿಯವರಂತೆ, ದೇವನೂರ ಮಹಾದೇವರಂತೆ.

–ಡಿ.ಎಸ್.ನಾಗಭೂಷಣ

ಕರ್ನಾಟಕದಲ್ಲಿನ ಬ್ಯಾಂಕ ಶಾಖೆಗಳಿಗೆ ತಮೀಳು, ತೆಲುಗು, ಮಲಯಾಳಿಗಳ ನೇಮಕಾತಿಗಳು ಈಗಲೂ ಮುಂದುವರೆದಿವೆ. ಕನ್ನಡಿಗರ ಪ್ರಾತಿನಿಧ್ಯ ಇಲ್ಲ ಎಂಬಷ್ಟಿದೆ. ಕನ್ನಡಪರ ಸಂಘಟನೆಗಳ ವಿರೋಧದ ನಡುವೆಯೂ ಅನ್ಯಭಾಷಿಕರ ಹಾವಳಿ ಹಾಗೆ ಇದೆ. ಕನ್ನಡಿಗರ ಪ್ರಾತಿನಿಧ್ಯ ಹೆಚ್ಚಿಸಲು ಕನ್ನಡ ಸಾಹಿತ್ಯ ಪರಿಷ್ಯತ್ತ ಹೆಚ್ಚಿನ ಒತ್ತಡತರಬೇಕು. **–ಸಂಗಪ್ಪ ಗಾಣಿಗೇರ**

ಗಾಂಧೀ

–ಲೂಯಿ ಫೀಶರ್.

ಗಾಂಧೀ ಯಾವಾಗಲೂ ತಮ್ಮ ಸುತ್ತಲಿನ ಪರಿಸರದೊಂದಿಗೆ ಸಮರಸ ಸಾಧಿಸಲು ಪ್ರಯತ್ನಿಸುತ್ತಿದ್ದರು.

***

ರುಚಿಯ ನಿಜವಾದ ಸ್ಥಾನ ನಾಲಿಗೆಯಲ್ಲಿಲ್ಲ ಮನಸ್ಸಿನಲ್ಲಿದೆ.

***

ಗಾಂಧೀ ಸುಮ್ಮನೆ ವಿದ್ಯಾರ್ಥಿಯಾಗಿರದೆ ಅವರೊಬ್ಬ ಕ್ರೀಯಾಶೀಲ ವಿದ್ಯಾರ್ಥಿಯಾಗಿದ್ದರು. ಅವರುತಮ್ಮ ಜ್ಞಾನವನ್ನು ಮತ್ತು ಆತ್ಮವಿಶ್ವಾಸವನ್ನು ಮತ್ತು ವ್ಯಕ್ತಿತ್ವವನ್ನು ಕ್ರೀಯೆಯ ಮೂಲಕವೇ ಪಡೆದರು.

***

ಗಾಂಧೀಯವರ ಗುರಿ ವಾಸ್ತವಾಗಿ ಸಾಧನಗಳನ್ನು ಉತ್ತಮ ಪಡಿಸುವುದಕ್ಕಾಗಯೇ ಇತ್ತು. ಅಂದರೆ ಸಾಧನಗಳ ಮೂಲಕ ಉತ್ತಮ ಮಾನವನನ್ನಾಗಿ ಮಾಡುವದು.

***

ಅಂತಿಮವಾಗಿ ಸ್ವಾತಂತ್ರ್ಯಕ್ಕೆ ಒಂದು ದೊಡ್ಡ ವಿಜಯವನ್ನು ತಂದುಕೊಟ್ಟರು.

***

ಗಾಂಧೀ ಜನರ, ಜನರಿಂದ ಮತ್ತು ಜನರಿಗಾಗಿ ಇದ್ದರು.

***

ರಾಜಕೀಯ ಜಗತ್ತಿನಲ್ಲಿ ನನಗೆ ಚರಕಕ್ಕಿಂತ ಹೆಚ್ಚು ಮಹತ್ವದ್ದು ಯಾವುದು ಇಲ್ಲ.

ಚಿಂತನೆಗೊಂದು ಸಂಗತಿ ವಿದ್ಯಾರ್ಥಿ ಮತ್ತು ಗುರಿ

೨೦೧೬ ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ. ಶೇಕಡ ೮೯%ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಓರ್ವ ವಿದ್ಯಾರ್ಥಿಯಂತೂ ೧೦೦ಕ್ಕೆ ೧೦೦ರಷ್ಟು ಅಂಕಗಳನ್ನು ಪಡೆದು ಇತಿಹಾಸ ಸೃಷ್ಟಿಸಿದ್ದಾನೆ. ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಇರುವ ತಂದೆತಾಯಿಗಳಿಗೆ ಇದು ಸಂತೋಷದ ವಿಷಯವಾಗಿದೆ. ಹಳ್ಳಿಹಳ್ಳಿಗಳಲ್ಲಿ ಹುಟ್ಟಿಕೊಂಡಿರುವ ಇಂಗ್ಲಿಷ್ ಮಾಧ್ಯಮದ ಶಾಲೆಗಳು ತಮ್ಮ ಶಾಲೆಯ ವಿದ್ಯಾರ್ಥಿಗಳ ಸಾಧನೆಯನ್ನು ಮಾಧ್ಯಮದ ಮೂಲಕ ಡಂಗೂರ ಸಾರುತ್ತಿವೆ. ಅನೇಕ ಶೈಕ್ಷಣಿಕ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿರುವ ಸೌಲಭ್ಯಗಳನ್ನು ಆರ್ಕಷಕ ಜಾಹಿರಾತು ಮೂಲಕ ಪ್ರಕಟಿಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಗೆ ಕೈ ಬೀಸಿ ಕರೆಯುತ್ತಿವೆ. ಈ ಮಧ್ಯೆ ಸಮಾಜ ಕಲ್ಯಾಣ ಸಚಿವರು ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಹೆಸರಿಲ್ಲಿ ಹಣ ಸಂಪಾದನೆ ಮಾಡುತ್ತಿರುವುದರಿಂದ ಅವುಗಳನ್ನು ವೇಶ್ಯಾವಾಟಿಕೆಗೆ ಹೋಲಿಸಿ ವಿವಾದಕ್ಕೊಳಗಾಗಿದ್ದಾರೆ. ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಹೊಂದಿದ ಕೆಲ ವಿದಾರ್ಥಿ ವಿದ್ಯಾರ್ಥಿನಿಯರು ತಮ್ಮ ಸಾಧನೆಗಾಗಿ ತಮ್ಮ ತಂದೆ ತಾಯಿಗಳು ಪಟ್ಟ ಪರಿಶ್ರಮದ ಬಗ್ಗೆ ತಮ್ಮ ಬಡತನದ ಬಗ್ಗೆ ಹೇಳುತ್ತಾ ಎಲ್ಲ ಬಗೆಯ ತೊಂದರೆಗಳನ್ನು ಮೀರಿ ತಾವು ತೇರ್ಗಡೆಯಾದದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಪತ್ರಿಕೆಗಳು ಸಹ ಅಂಥ ವಿದ್ಯಾರ್ಥಿಗಳ ಸಾಧನೆಯನ್ನು ರಂಜಕವಾಗಿ ಪ್ರಕಟಿಸಿದೆ. ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಅವರ ಮುಂದಿನ ಕನಸಿನ ಬಗ್ಗೆ ಕೇಳಿದಾಗ ಹೆಚ್ಚಿನ ವಿದ್ಯಾರ್ಥಿಗಳು ತಾವು ಡಾಕ್ಟರ್ ಹಾಗು ಇಂಜಿನಿಯರ್ ಆಗುವೆವು ಎಂದು ಹೇಳಿದ್ದಾರೆ. ಪ್ರಥಮ ದರ್ಜೆಯಲ್ಲಿ ಪಾಸಾಗಿರುವ ವಿದ್ಯಾರ್ಥಿ ತಾನು ಐ.ಪಿ.ಎಸ್. ಅಧಿಕಾರಿಯಾಗಲು ಪ್ರಯತ್ನಿಸುವುದಾಗಿ ಹೇಳುತ್ತಾನೆ. ವಿದ್ಯಾರ್ಥಿಗಳು ತಮ್ಮ ಭವಿಷ್ಯ ಜೀವನದ ಬಗ್ಗೆ ಹೇಳಿದ ಈ ಅಭಿಪ್ರಾಯಗಳನ್ನು ನೋಡಿದರೆ ಅವರ ಮನಸ್ಸಿಲ್ಲಿ ಹಣ ಮತ್ತು ಅಧಿಕಾರವೇ ಪ್ರಮುಖವಾಗಿದೆಯೆನ್ನಿಸುತ್ತದೆ. ಈ ವಿಚಾರಗಳ ಹಿಂದೆ ಸ್ವಲ್ಪ ಸೇವಾ ಭಾವನೆಯ ವಿಚಾರ ಖಂಡಿತ ಇರಬಹುದಾದರೂ ಪ್ರಧಾನವಾಗಿ ಹಣ ಮತ್ತು ಪ್ರತಿಷ್ಠೆಯ ವಿಚಾರವೇ ಇರುವಂತೆ ತೋರುತ್ತಿದೆ. ಜೀವನದ ವಿವಿದ ಕ್ಷೇತ್ರಗಳಾದ ಸಾಹಿತ್ಯ, ಕಲೆ, ಸಮಾಜ, ಸೇವೆ, ಕ್ರೀಡೆ, ಕೃಷಿ, ಕುಟೀರೋದ್ಯಮಗಳ ಬಗ್ಗೆ ವಿದ್ಯಾರ್ಥಿಗಳ ತಲೆಯಲ್ಲಿ ಯಾವುದೇ ವಿಚಾರ ಬರದೇ ಇರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಇದರ ಅರ್ಥ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಜೀವನದ ವಿವಿಧ ಕ್ಷೇತ್ರಗಳಲ್ಲಿರಬಹುದಾದ ಸಾಧನೆಗಳ ಪರಿಚಯ ಮಾಡಿಕೊಟ್ಟಿಲ್ಲವೆಂದು ಅರ್ಥವಾಗುವುದರ ಜೊತೆ ಶಿಕ್ಷಣ ಕೇವಲ ಹಣಮುಖಿಯಾಗಿದೆಯೆಂದು ಶಿಕ್ಷಣ ಕ್ಷೇತ್ರದಲ್ಲಿಯ ಈ ವಿಷಮ ಸ್ಥಿತಿಯ ಬಗ್ಗೆ ಎಲ್ಲರೂ ಚಿಂತನೆ ಮಾಡಬೇಕಿದೆ.

ಮುಖ್ಯಮಂತ್ರಿಯವರಿಗೆ ಮನವಿ

ಪತ್ರ ಸಂ: ಕ.ಸ.ಮ/೨೧೦/೨೦೧೬-೧೭ ದಿನಾಂಕ: ೨೨/೦೪/೨೦೧೬

ಶ್ರೀ ಸಿದ್ಧರಾಮಯ್ಯನವರು,
ಮಾನ್ಯ ಮುಖ್ಯಮಂತ್ರಿ,
ವಿಧಾನಸೌಧ. ಬೆಂಗಳೂರು-೦೧

ಮಾನ್ಯರೇ,

ವಿಷಯ:- ರಾಜ್ಯದಲ್ಲಿ ಮದ್ಯಪಾನ ನಿಷೇಧಕ್ಕೆ ಆಗ್ರಹ

******

ಇತ್ತೀಚಿಗೆ ಬಿಹಾರ ರಾಜ್ಯದಲ್ಲಿ ಅಲ್ಲಿಯ ಮುಖ್ಯಮಂತ್ರಿ ಶ್ರೀ ನಿತೀಶ್‌ಕುಮಾರರವರು ಎಲ್ಲ ಬಗೆಯ ಮದ್ಯಪಾನ ಮತ್ತು ಮದ್ಯ ಉತ್ಪಾದನೆಯನ್ನು ಪೂರ್ಣವಾಗಿ ನಿಷೇಧ ಮಾಡಿದ್ದಾರೆ. ತಮಿಳುನಾಡಿನಲ್ಲೂ ಹಂತ ಹಂತವಾಗಿ ನಿಷೇಧವನ್ನು ಜಾರಿಗೆ ತರಲಾಗುವುದೆಂದು ಅಲ್ಲಿಯ ನಾಯಕಿ ಜಯಲಲಿತಾ ಘೋಷಿಸಿದ್ದಾರೆ.

ಮದ್ಯಪಾನದಿಂದ ನಮ್ಮ ರಾಜ್ಯದ ಕುಟುಂಬಗಳು ಹಾಳಾಗುತ್ತಿವೆ ಗ್ರಾಮಗಳಲ್ಲಿ ಮದ್ಯಪಾನಿಗಳ ಹಾವಳಿ ಹೆಚ್ಚಾಗಿ ಮಹಿಳೆಯರ ಮತ್ತು ಮಕ್ಕಳ ಸ್ಥಿತಿ ಶೋಚನೀಯವಾಗಿದೆ.

ಸಮಾಜವಾದದಲ್ಲಿ ನಂಬಿಕೆ ಇರುವ ತಾವು ಕರ್ನಾಟಕ ರಾಜ್ಯದಲ್ಲಿ ಮದ್ಯಪಾನ ನಿಷೇಧ ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಮಾಡಬೇಕಾಗಿ ವಿನಂತಿ. ರಾಜ್ಯದ ಬಹುಸಂಖ್ಯಾತ ಜನರಇಚ್ಛೆಯೂ ಇದೇ ಆಗಿದೆ.

ತಾವು ಆದಷ್ಟು ಬೇಗ ಕ್ರಮಕೈಗೊಳ್ಳಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ಸ್ಥಳ: ಮೇಲುಕೋಟೆ
ದಿನಾಂಕ: ೨೨/೦೪/೨೦೧೬

ತಮ್ಮ ವಿಶ್ವಾಸಿ
ಸುರೇಂದ್ರ ಕೌಲಗಿ
ಅಧ್ಯಕ್ಷರು,
ಕರ್ನಾಟಕ ಸರ್ವೋದಯ ಮಂಡಲ.
E-mail: Janapada.office@gmail.com

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ಪತ್ರ

ದಿನಾಂಕ: ೨೧/೦೪/೨೦೧೬

ಮಾನ್ಯ, ಸಹೋದರ/ಸಹೋದರಿಯರೆ,

ವಿಷಯ:- ಲೋಕಸೇವಕರ ನವೀಕರಣ

ಉಲ್ಲೇಖ:-೩೬೪/೨೦೧೫-೧೬ ದಿನಾಂಕ: ೩೧/೦೩/೨೦೧೬

ಜೈ ಜಗತ್

ಪ್ರತಿಯೋರ್ವ ಲೋಕಸೇವಕ ತನ್ನ ಸದಸ್ಯತ್ವವನ್ನು ಲೋಕಸೇವಕ ಪ್ರತಿಜ್ಞಾಪತ್ರ ಭರ್ತಿಮಾಡಿ ನವೀಕರಿಸಬೇಕೆಂಬುದು ಸರ್ವ ಸೇವಾ ಸಂಘದ ನಿಯಮವಾಗಿದೆ. ಆದರೆ ಅನೇಕ ಸದಸ್ಯರಿಗೆ ತಮ್ಮ ಸದಸ್ಯತ್ವ ಯಾವಾಗ ಮುಗಿಯಿತು ಮತ್ತು ಸದಸ್ಯತ್ವವನ್ನು ಯಾವಾಗ ನವೀಕರಿಸಿಕೊಳ್ಳಬೇಕೆಂದು ಗೊತ್ತಾಗದೆ ಗೊಂದಲವುಂಟಾಗುತ್ತಿದೆ.

ಮೇಲ್ಕಾಣಿಸಿದ ಗೊಂದಲವನ್ನು ನಿವಾರಿಸುವುದಕ್ಕಾಗಿ ಸರ್ವ ಸೇವಾ ಸಂಘ. ಪಶ್ಚಿಮ ಬಂಗಾಳದ ಮೌರಿ ಗ್ರಾಮದಲ್ಲಿ ೨೦೧೬ ಫೆಬ್ರವರಿ ೨೫ ಮತ್ತು ೨೬ ದಿನಾಂಕಗಳಲ್ಲಿ ನಡೆದ ಆಡಳಿತ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಈ ಕೆಳಗೆ ಕಾಣಿಸಿದ ತೀರ್ಮಾನ ಕೈಗೊಂಡಿದೆ.

೨೦೧೬-೧೭ ನೇ ಸಾಲಿಗೆ ಎಲ್ಲ ಲೋಕಸೇವಕರು ಹೊಸದಾಗಿ ಲೋಕಸೇವಕ ನಮೂನೆಯನ್ನು ಭರ್ತಿ ಮಾಡಬೇಕು.

ಕಳೆದ ವರ್ಷ ಲೋಕಸೇವಕ ನಮೂನೆಯನ್ನು ಭರ್ತಿ ಮಾಡಿದ್ದರೂ ಕೂಡ ೨೦೧೬-೧೭ ನೇ ಸಾಲಿಗೆ ನಮೂನೆಯನ್ನು ಭರ್ತಿ ಮಾಡುವದು ಕಡ್ಡಾಯ. ಆನಂತರ ಮುಂದೆ ಪ್ರತಿ ಮೂರು ವರ್ಷಕ್ಕೆ ಸದಸ್ವತ್ವವನ್ನು ನವೀಕರಿಸಿಕೊಳ್ಳಬೇಕು.

ಪ್ರತಿವರ್ಷ ಏಪ್ರಿಲ್ ೧ರಿಂದ ಜೂನ ೩೦ರವರೆಗಿನ ಅವಧಿಯಲ್ಲಿ ನವೀಕರಿಸಿಕೊಳ್ಳಬೇಕು. ಭರ್ತಿಮಾಡಿದ ನಮೂನೆ ಮತ್ತು ಸದಸ್ಯತ್ವ ಶುಲ್ಕ ಸರ್ವ ಸೇವಾ ಸಂಘದ ಕಛೇರಿಯನ್ನು ಜುಲೈ ೩೧ರ ಒಳಗಾಗಿ ತಲುಪಬೇಕು.

ಲೋಕಸೇವಕನ ಸದಸ್ಯತ್ವವನ್ನು ಕಳೆದ ಎರಡು ವರ್ಷಗಳಿಂದ ಲೋಕಸೇವಕರಾಗಿರುವವರು ಶಿಫಾರಸ್ಸು ಮಾಡಬೇಕು. ಹೊಸ ಲೋಕಸೇವಕರನ್ನು ಆ ವರ್ಷದಲ್ಲಿ ಯಾವಾಗಲಾದರು ಮಾಡಬಹುದು.

ಲೋಕಸೇವಕರ ವಾರ್ಷಿಕ ಸದಸ್ಯತ್ವ ೨೫ ರೂಪಾಯಿ. ಅದರ ಹಂಚಿಕೆ ಈ

ಕೆಳಗಿನಂತೆ;

ಜಿಲ್ಲಾ ಸರ್ವೋದಯ ಮಂಡಲಕ್ಕೆ	=೦೫
ಪ್ರದೇಶ ಸರ್ವೋದಯ ಮಂಡಲಕ್ಕೆ	=೧೦
ಸರ್ವ ಸೇವಾ ಸಂಘಕ್ಕೆ	=೧೦
ಒಟ್ಟು	೨೫

ಸರ್ವೋದಯ ಮಿತ್ರರು ಕೂಡ ಪ್ರತಿವರ್ಷ ಏಪ್ರಿಲ್ ೧ರಿಂದ ಮಾರ್ಚ್ ೩೦ರೊಳಗಾಗಿ ಸದಸ್ಯತ್ವ ಶುಲ್ಕದೊಂದಿಗೆ ಪ್ರತಿಜ್ಞಾ ನಮೂನೆಯನ್ನು ಭರ್ತಿ ಮಾಡಿ ಕಳುಹಿಸಬೇಕು.

ಸರ್ವೋದಯ ಮಿತ್ರರ ಸದಸ್ಯತ್ವ ಶುಲ್ಕ ೧೦ ರೂಪಾಯಿ. ಅದರ ಹಂಚಿಕೆ;

ಜಿಲ್ಲಾ ಸರ್ವೋದಯ ಮಂಡಲಕ್ಕೆ	=೦೬
ಪ್ರದೇಶ ಸರ್ವೋದಯ ಮಂಡಲಕ್ಕೆ	=೦೨
ಸರ್ವ ಸೇವಾ ಸಂಘಕ್ಕೆ	=೦೨
ಒಟ್ಟು	೧೦

ದಯಮಾಡಿ ನೀವು ಸದಸ್ಯತ್ವದ ನವೀಕರಣಕ್ಕಾಗಿ ಕ್ರಮಕೈಗೊಳ್ಳಬೇಕಾಗಿ ಮತ್ತು ಈ ಮಾಹಿತಿಯನ್ನು ಲೋಕಸೇವಕರಿಗೂ ಮತ್ತು ಸರ್ವೋದಯ ಮಿತ್ರರಿಗೂ ಕೊಡಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಮಹಾದೇವ ವಿದ್ರೋಹಿ
ಅಧ್ಯಕ್ಷರು, ಸ.ಸೇ.ಸ

ಸೂಕ್ತ ಕ್ರಮಕ್ಕಾಗಿ ರಚಿತಗೊಂಡಿರುವ ಎಲ್ಲ ಜಿಲ್ಲಾ ಸರ್ವೋದಯ ಮಿತ್ರ ಮಂಡಳಿಗೆ ಕಳುಹಿಸಲಾಗಿದೆ. ಇದು ಮೂಲ ಇಂಗ್ಲಿಷ ಪತ್ರದ ಕನ್ನಡ ಅವತರಣಿಕೆ.

ಸುರೇಂದ್ರ ಕೌಲಗಿ, ಅಧ್ಯಕ್ಷರು

ಕರ್ನಾಟಕ ಸರ್ವೋದಯ ಮಂಡಲ

ಮಾನ್ಯ ಸರ್ವೋದಯ ಮಿತ್ರರೇ ಮುಖ್ಯಮಂತ್ರಿಯವರಿಗೆ ಬರೆದ ಕಾಗದವನ್ನು ಇದರ ಜೊತೆ ಕಳುಹಿಸಲಾಗಿದೆ. ಅದೇ ಮಾದರಿಯಲ್ಲಿ ನಿಮ್ಮ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯಿಂದಲ್ಲೂ ಒಂದು ಮನವಿ ಪತ್ರವನ್ನು ಮುಖ್ಯಮಂತ್ರಿವರಿಗೆ ಕಳುಹಿಸಿ ರಾಜ್ಯ ಸರ್ವೋದಯ ಮಂಡಲಕ್ಕೆ ತಿಳಿಸಬೇಕಾಗಿ ವಿನಂತಿ. ದೂ: ೯೧೪೧೭೦೦೮೧೨

ಲೋಕಸೇವಕ ಕಾಂತಿಶಾಹ: ಒಂದು ನೆನಪು

ಮಹಾತ್ಮ ಗಾಂಧೀ ಮತ್ತು ವಿನೋಬಾ ಭಾವೆಯವರ ಅನುಯಾಯಿ ಮತ್ತು ಗೋವಂಶ ಹತ್ಯೆಯ ವಿರುದ್ಧ ಪ್ರತಿಬಂಧ ತರುವುದಕ್ಕಾಗಿ ಇಡೀ ಜೀವನ ಹೋರಾಟ ಮಾಡಿದ ಸರ್ವೋದಯ ಕಾರ್ಯಕರ್ತ ಕಾಂತಿಭಾಯಿ ಶಾಹ. ತಮ್ಮ ೮೮ನೇ ವಯಸ್ಸಿನಲ್ಲಿ ಅಹಮ್ಮದಾಬಾದ ಬಳಿ ಕಾವಿಟ್ಟದಲ್ಲಿ ಇರುವ ಗೋಶಾಲೆಯಲ್ಲಿ ತಿರಿಕೊಂಡರು.

ಮುಂಬೈಯಲ್ಲಿ ಸರ್ವೋದಯ ಮಂಡಲ, ಗೋವಿಜ್ಞಾನಭಾರತಿ ಮತ್ತು ಅನ್ಯ ಸಂಸ್ಥೆಗಳಿಗಾಗಿ ೧೯೫೪ರಿಂದ ೧೯೭೭ರವರೆಗೆ ತಮ್ಮ ಜೀವನವನ್ನು ಸಮರ್ಪಣೆ ಮಾಡಿದ ಕಾಂತಿಭಾಯಿ ತಮ್ಮ ದೇಹವನ್ನೂ ಮೇಡಿಕಲ್ ರಿಸರ್ಚಕ್ಕಾಗಿ ದಾನಮಾಡಿ ಹೋಗಿದ್ದಾರೆ!

೧೯೫೯-೬೦ರಲ್ಲಿ ಮುಂಬೈ ಉಪನಗರ ಘಾಟ್‌ಕೋಪರನಲ್ಲಿ ಅತ್ಯಂತ ಸರಳ ಜೀವನವನ್ನು ನಡೆಸಿ ಕುಟುಂಬದ ಬಗ್ಗೆ ಚಿಂತಯನ್ನೇ ಮಾಡದೆ ಸರ್ವೋದಯ ಪ್ರವೃತಿಗಳನ್ನು ಪ್ರಾರಂಭಮಾಡಿದರು. ಘಾಟ್‌ಕೋಪರನಲ್ಲಿ ಸರ್ವೋದಯು ಪಾತ್ರೆಗಳ ಮೂಲಕ ೫೦೦ ಪರಿವಾರಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದ್ದರು. ಸರ್ವೋದಯ ಮಂಡಲವು ಅವರಿಗೆ ೬೦ ರಿಂದ ೧೫೦ ರೂವರೆಗೆ ಮಾತ್ರ ಗೌರವಧನವನ್ನು ಕೊಟ್ಟಿತು. ಕಾಂತಿಭಾಯಿಯವರ ನಿಷ್ಠೆಯನ್ನು ನೋಡಿ ಘಾಟ್‌ಕೋಪರನ ಜನತೆ ಅವರಿಗೆ ಚಿಕ್ಕದೊಂದು ಪ್ಲ್ಯಾಟ್ ಕೊಟ್ಟರು. ವಿನೋಬಾ ಭಾವೆ ದೇವನಾರ ಕಸಾಯಿಖಾನೆಯಲ್ಲಿ ಗೋವಂಶ ಹತ್ಯೆಯು ನಿಷೇದಕ್ಕಾಗಿ ಸತ್ಯಾಗ್ರಹ ಪ್ರಾರಂಭಿಸಿದಾಗ ಕಾಂತಿಭಾಯಿ ಘಾಟ್‌ಕೋಪರದಲ್ಲಿಯ ಸರ್ವೋದಯ ಹಾಸ್ಪಿಟಲ್ ಟ್ರಸ್ಟಿಗಳ ಸಹಯೋಗದೊಂದಿಗೆ ದೇಶದಲ್ಲೆಡೆಯಿಂದ ಬಂದ ಸತ್ಯಾಗ್ರಹಿಗಳಿಗೆ ಆಸ್ಪತ್ರೆಯಲ್ಲಿ ಬಿಡದಿಯ ವ್ಯವಸ್ಥೆ ಮಾಡಿದರು. ಗೋವಂಶ ಹತ್ಯಾ ನೀಷೇಧಕ್ಕಾಗಿ ೩೩ ವರ್ಷದರೆಗೆ ಸತ್ಯಾಗ್ರಹವನ್ನು ಅವರು ಜೀವಂತವಾಗಿಟ್ಟರು.

-ಸದ್ಭಾವನಾ ಸಾಧನಾ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಭೇಟಿ

ಬೆಂಗಳೂರಿನಿಂದ ದೀಪ್ತಿ ಮತ್ತು ರವಿಶಂಕರ ಭೇಟಿ ನೀಡಿ ಸಂಸ್ಥೆಯ ಚಟುವಟಿಕೆಗಳನ್ನು ನೋಡಿ ಸಂತೋಷ ಪಟ್ಟರು. ಸಂಸ್ಥೆಯೊಂದಿಗೆ ಬಹಳ ವರ್ಷಗಳಿಂದ ಒಡನಾಟ ಇಟ್ಟುಕೊಂಡಿರುವ ರಾಜು ಮಂಜುಳಾ, ರೇಖಾಂಬ, ಸಬಿತ ಖನ್ನಾಡಿ ಮತ್ತು ಸ್ನೇಹಿತರು ಶಿವಮೊಗ್ಗದಿಂದ ಬಂದು ಸಂಸ್ಥೆಯ ಚಟುವಟಿಕೆಗಳೊಂದಿಗೆ ಎರಡು ದಿನ ಕಾಲ ಕಳೆದರು. ಬೆಂಗಳೂರಿನಿಂದ ಆನವಟ್ಟಿ ಹಾಗೂ ಸಂಗಡಿಗರು ಸಂಸ್ಥೆಗೆ ಭೇಟಿ ನೀಡಿದರು. ಬೆಂಗಳೂರಿನ ಶ್ರೀ.ಸಿ.ಕೆ.ಸುರೇಶ್ ಹಾಗೂ ಹೈದರಾಬಾದಿನ ಕೃಷ್ಣರಾಜು ಭೇಟಿ ನೀಡಿದರು. ಶ್ರೀ ಸುದರ್ಶನ (ಸಲಹೆಗಾರರು, ಖಾದಿ ಕಮೀಶನ್, ಭಾರತ ಸರ್ಕಾರ) ಸಂಸ್ಥೆಗೆ ಭೇಟಿ ನೀಡಿದರು. ಇತ್ತೀಚಿನ ವರ್ಷಗಳಲ್ಲಿ ದೇಶದಾದ್ಯಂತ ಖಾದಿ ಕೇಂದ್ರಗಳು ಜನರಿಲ್ಲದೆ ಸ್ಥಗಿತ ಗೊಳ್ಳುತ್ತಿರುವ ಸಂದರ್ಭದಲ್ಲಿ ಟ್ರಸ್ಟಿನ ನೇಯ್ಗೆ ಕೇಂದ್ರದಲ್ಲಿ ಯುವಕ/ಯುವತಿಯರ ನೇಯ್ಗೆ ಕೆಲಸ ಮಾಡುತ್ತಿರುವದನ್ನು ಕಂಡು ಬಹಳ ಸಂತೋಷಪಟ್ಟು ಕೆಲಸವನ್ನು ಪ್ರಶಂಸಿಸಿದರು.

ಪ್ರಗತಿ

ಸಂಸ್ಥೆಯಲ್ಲಿನ ಕೆಲಸಗಾರರ ನಡುವೆ ಬಾಂಧವ್ಯವನ್ನು ಬೆಸೆಯಲು ಹಾಗೂ ಪ್ರಪಂಚದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಅರಿವು ಮೂಡಿಸಲು ಸಂಸ್ಥೆಯ ಎಲ್ಲ ಕೆಲಸಗಾರರು ಸೇರಿ ತಿಂಗಳಲ್ಲಿ ಒಂದು ದಿನ ಸಮಾಜಮುಖಿ ಸಿನಿಮಾ ವೀಕ್ಷಣೆ ಹಾಗೂ ತಮ್ಮ ತಮ್ಮ ಮನೆಗಳಿಂದ ತಾವು ತಯಾರಿಸಿದ ಅಡುಗೆಯನ್ನು ತಂದು ಎಲ್ಲರೊಡನೆ ಹಂಚಿ ಊಟ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತೀರ್ಮಾನಿಸಲಾಯಿತು. ಈ ತಿಂಗಳು ಸಾಮೂಹಿಕ ಭೋಜನ ಮತ್ತು ವಿಚಾರ ವಿನಿಮಯಗಳು ನಡೆದ ನಂತರ ಡಾ॥ ರಾಜಕುಮಾರ್ ಅಭಿನಯಿಸಿರುವ ಮೇಯರ ಮುತ್ತಣ್ಣ ಸಿನಿಮಾವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮವು ಕೆಲಸಗಾರರಲ್ಲಿ ಸಂತೋಷವನ್ನು ತಂದಿತು. ಈ ತಿಂಗಳು ಸಂಸ್ಥೆಯ ನೇಯ್ಗೆ ಕೇಂದ್ರಕ್ಕೆ ನಾಲ್ಕು ಜನ ಹೊಸದಾಗಿ ಹಳ್ಳಿಯ ಹೆಣ್ಣುಮಕ್ಕಳು ಸೇರಿದರು. ಇದರಿಂದ ಸಂಸ್ಥೆಯ ಎಲ್ಲ ಖಾದಿ ಹತ್ತು ಮಗ್ಗಗಳು ಸಂಪೂರ್ಣವಾಗಿ ಕೆಲಸ ನಿರ್ವಹಿಸುವಂತಾಯಿತು. ಜನಪ್ರಿಯವಾಗಿದ್ದ ಹೆಗಲು ಚೀಲಗಳ ಉತ್ಪಾದನೆ ಪುನರ್ ಪ್ರಾರಂಭವಾಯಿತು. ಮೈಸೂರಿನ ಡೆಮಾನ್‌ಸ್ಟ್ರೆಷನ್ ಶಾಲೆಯ ಶಿಕ್ಷಕರಿಗೆ ಒಂದು ದಿನದ ಶೈಕ್ಷಣಿಕ ಕಾರ್ಯಗಾರವನ್ನು ಪ್ರಾರಂಭಿಸಲಾಯಿತು. ಶ್ರೀ ಮನು.ಕೆ. ಹಾಗೂ ಶ್ರೀ.ಸಂತೋಷ ಕೌಲಗಿಯವರು ಕಾರ್ಯಗಾರವನ್ನು ನಡೆಸಿಕೊಟ್ಟರು.

ಆಭಾರ

ಸ್ನೇಹಿತರಾದ ಬೆಂಗಳೂರಿನ ಶ್ರೀ.ಅಶೋಕ್ ಹಾಗೂ ಕುಟುಂಬದವರು ದತ್ತು ಸೇವಾ ಕೇಂದ್ರ ಹಾಗೂ ಶ್ರೀ ಕೃಷ್ಣ ಕನ್ನಡ ಶಿಶುವಿಹಾರಕ್ಕೆ ಹೊರಾಂಗಣ ಆಟದ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದರು. ಸಂಸ್ಥೆಯು ಅವರಿಗೆ ಕೃತಜ್ಞ. ಬೆಂಗಳೂರಿನ ಸಸ್ಯತಜ್ಞ ಶ್ರೀ ಶೇಷಾದ್ರಿ ಹಾಗೂ ಸ್ನೇಹಿತರು ಮೇಲುಕೋಟೆಯ ಯುವಕರೊಡನೆ ಸೇರಿ ಮೇಲುಕೋಟೆ ಅರಣ್ಯದಿಂದ ಕಾಡು ಮರಗಳ ಬೀಜಗಳನ್ನು ಸಂಗ್ರಹಿಸಿ ನೆನೆಬನ ಯೋಜನೆಗೆ ನರ್ಸರಿಯನ್ನು ಮಾಡಲು ಸಹಾಯಮಾಡಿದರು.

ವರದಿ: ಸುಮನಸ್ ಕೌಲಗಿ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಎಚ್.ವಿಶ್ವನಾಥ –ಬೆಂಗಳೂರು
ಶ್ರೀ ಜಿ.ಎಸ್.ಜಯದೇವ –ಚಾಮರಾಜನಗರ
ಶ್ರೀ ಜೆ.ಕೆ. ಪವನ್ ಗಣಸಿ, ಶ್ರೀ ಎಮ್.ರಾಜು –ಶಿವಮೊಗ್ಗ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಪಿ.ಶ್ರೀನಿವಾಸ್, ಡಾ॥ ಪುರುಷೊತ್ತಮ್ ಶ್ರೀ ಪಿ.ಜೆ.ಕುಮಾರ್
ಡಾ॥ ಜೆ.ಕೆ. ಸುರೇಶ್ ಶ್ರೀ ಎಚ್.ಎನ್. ಗಣಪತಿ –ಬೆಂಗಳೂರು
ಶ್ರೀ ಪಿ.ಎಲ್.ಹೊನ್ನೇಗೌಡ, –ಪಾಂಡವಪುರ
ಶ್ರೀ ಎಮ್.ಎನ್. ಲೋಕೇಶ್ ಮಾದೇಗೌಡನ ಕೊಪ್ಪಲು, –ಚನ್ನರಾಯಪಟ್ಟಣ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.


ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

Insufficient Address hence Return to Sender

ತೆರೆದ ಅಂಚೆ



KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.

Mr Jagadish V
#1113/3, Sharada Railway Layout, Kergaliy
Main Road, Bogadi Mysore -

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237